CC-O. In Public Domain. Digitized by eGangotri

ಪ್ರಕಟಣೆ : 196

ಪ್ರಭುದೇವ

(ಪ್ರಭುಲಿಂಗಲೀಲೆಯ ನಾಟ್ಯ ರೂಪ)

ರಚನೆ :
ಬಿ. ಪುಟ್ಟಸ್ವಾಮಯ್ಯ

ಶಾರದಾ ಪ್ರಕಾಶನ
ಅರಳೆಪೇಟೆ :: ಬೆಂಗಳೂರು-560 053

Sri Vidyabharathi Book Centre, Sringeri

CC-0. In Public Domain. Digitized by eGangotri

PRABHUDEVA—Play in blank verse based on Chamarasa's famous poem, "Prabhulinga Leele". Author—B. Puttaswamaiah. Published by Sharada Prakashana, Bangalore-53.

ಪರಿಷ್ಕೃತ ಮುದ್ರಣ : 1981

© ಹಕ್ಕುಗಳು ಲೇಖಕರ ವಶ

ಮುದ್ರಣ :
ಎಮ್ ಎಮ್ ಪ್ರಿಂಟಿಂಗ್ ವರ್ಕ್ಸ್
ಬೆಂಗಳೂರು-4.

ಸೂಚನೆ : "ಪ್ರಭುದೇವ" ನಾಟಕವನ್ನು ಅಭಿನಯಿಸಲಿಚ್ಛಿಸುವವರು ಐವತ್ತು ರೂಪಾಯಿ ಗೌರವಧನವನ್ನು ಸಲ್ಲಿಸಿ ಲೇಖಕರ ಲಿಖಿತ ಅನುಮತಿ ಪಡೆಯತಕ್ಕದ್ದು.

ವಿಳಾಸ : ಬಿ. ಪುಟ್ಟಸ್ವಾಮಯ್ಯ, ನಂ. 44, ಮೊದಲ ಅಡ್ಡ ರಸ್ತೆ, ಶ್ರೀರಾಂಪುರ, ಬೆಂಗಳೂರು-560021.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಸ್ತಾವನೆ

ಅಸಂಗತ, ಅಪ್ರಸ್ತುತ, ಅಪಹೃತ, ಅನುವಾದಿತ, ರೂಪಾಂತರಿತ ಎಂದೆಲ್ಲ ಹೆಸರಿಸಬಹುದಾದ ನಾಟಕ ಪ್ರದರ್ಶನಗಳು ಜನಪ್ರಿಯವಾಗುತ್ತಿರುವ ಈಗಿನ ವಿಚಿತ್ರ "ಸಂದರ್ಭ"ದಲ್ಲಿ "ಪ್ರಭುಲಿಂಗಲೀಲೆ" ಅಂತಹ ಸಂಕೇತ ಪ್ರಧಾನವಾದ ಧಾರ್ಮಿಕ ಕಾವ್ಯದ ನಾಟ್ಯರೂಪವನ್ನು ಪ್ರಕಟಿಸುವುದು ಸಾಹಿತ್ಯಕ ಸಾಹಸವೇ ಆಗಬಹುದಾದ ಅಪಾಯವಿದೆ. ಈ ರೀತಿಯ ಸಾಹಸ ಕಾರ್ಯದಲ್ಲಿ ಪ್ರಕಾಶಕರನ್ನು ತೊಡಗಿಸುವುದರ ಔಚಿತ್ಯವೇನು? ಉದ್ದೇಶವೇನು? ಈ ಪ್ರಶ್ನೆಗಳಿಗೆ ಉತ್ತರ ಈ ಪ್ರಸ್ತಾವನೆ.

ಕನ್ನಡ ಲೇಖಕರು, ಪ್ರಕಾಶಕರು ಈಗ ಎದುರಿಸುತ್ತಿರುವ ಅಲಾಭಕರ ಆತಂಕಕಾರಿ ಪರಿಸ್ಥಿತಿಯಲ್ಲಿ ಪ್ರಾಮಾಣಿಕ ಲೇಖಕನಿಗೆ ಇರುವುದು ಎರಡೇ ದಾರಿ,

೧. ಬರೆಯುವುದನ್ನೇ ನಿಲ್ಲಿಸುವುದು,

೨. ಭಾವಶುದ್ಧಿ, ಭಾಷಾಶುದ್ಧಿ, ವ್ಯಾಕರಣ, ಛಂದಸ್ಸು ಈ ಪರಂಪರಾಗತ ಶಿಷ್ಟಮೌಲ್ಯಗಳಿಗೆ ಶರಣು ಹೊಡೆದು, ಪ್ರಯತ್ನ ಪೂರ್ವಕವಾಗಿ ಅವುಗಳನ್ನು ಉಲ್ಲಂಘಿಸಿ ಕಾವ್ಯ ರಂಗಕ್ಕೆಳಿಯುವುದು.

ಈ ಎರಡು ಮಾರ್ಗಗಳೂ ಪರಿಣಾಮದಲ್ಲಿ ವಿಫಲವೆಂದೂ, ಆತ್ಮಘಾತ ದಷ್ಟೇ ದೌರ್ಬಲ್ಯಸೂಚಕವೆಂದೂ ನಿರ್ಧರಿಸಿ, "ಪ್ರಭುದೇವ" ರೂಪಕವನ್ನು ಮಾನ್ಯ ವಾಚಕರ ಮುಂದಿಡುತ್ತಿದ್ದೇನೆ.

ಚಾಮರಸನ "ಪ್ರಭುಲಿಂಗಲೀಲೆ" ಸಂಕೇತ ಪ್ರಧಾನವಾದ ಧಾರ್ಮಿಕ ಕಾವ್ಯ. ಶರಣ ಧರ್ಮದ ನವೋದಯ ಕಾಲದಲ್ಲಿ ಅವತರಿಸಿದ ಬಸವೇಶ್ವರ, ಅಲ್ಲಮಪ್ರಭು, ಚೆನ್ನಬಸವೇಶ್ವರ, ಸಿದ್ಧರಾಮ. ಅಕ್ಕಮಹಾದೇವಿ ಮೊದಲಾದ ಶರಣರ ಜೀವನದ ಪ್ರಮುಖ ಘಟನೆಗಳನ್ನು ಆಧರಿಸಿ, ಪರಿಷ್ಕೃತ ಶೈವಧರ್ಮದ ತತ್ವಗಳನ್ನು ಸಾಂಕೇತಿಕವಾಗಿ ನಿರೂಪಿಸುವಲ್ಲಿ ಚಾಮರಸನ "ಪ್ರಭುಲಿಂಗಲೀಲೆ" ಪ್ರಮುಖ ಸ್ಥಾನ ಪಡೆದಿರುತ್ತದೆ. ಪುರಾಣಗಳ ಸಂಕೀರ್ಣ, ಸಂದಿಗ್ಧ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಿಗೆ ಎಡೆಗೊಡದೆ, ವಾಸ್ತವ ಘಟನೆಗಳನ್ನು ಸಂಕೇತಗಳ ಮೂಸೆಯಲ್ಲಿಟ್ಟು ವಾಸ್ತವಕ್ಕೆ ದೂರವಲ್ಲದ ಚಿತ್ರಗಳನ್ನು ರೂಪಿಸುವಲ್ಲಿ ಚಾವರಸನು ಪ್ರಭುತ್ವ ಪ್ರಾವೀಣ್ಯಗಳನ್ನು ಮೆರೆಸಿದ್ದಾನೆ. ಅವನ ಕೃತಿ ಗಾತ್ರದಲ್ಲಿ ಕಿರಿದಾದರೂ ಕುಮಾರವ್ಯಾಸ ಭಾರತದಂತೆ ಜನಪ್ರಿಯತೆ ಗಳಿಸಿದೆ. ಬೆಂಗಳೂರು ಆಕಾಶ ವಾಣಿಗಾಗಿ 1953 ರಲ್ಲಿ ನಾನು ಚಾವರಸನ ಕೃತಿಯನ್ನು ಆಧರಿಸಿ ರಚಿಸಿದ "ಪ್ರಭುದೇವ" ಪ್ರಸಾರವಾಗಿ, ಶ್ರೋತೃಗಳ ಮೆಚ್ಚುಗೆ ಪಡೆದು ಕೆಲವೇ ದಿನ ಗಳಲ್ಲಿ ಮರುಪ್ರಸಾರವಾಗಿ, ಪುಸ್ತಕ ರೂಪದಲ್ಲಿ ಪ್ರಕಟವಾಯಿತು.

ಆಮೇಲಿನ ದಿನಗಳಲ್ಲಿ ನಾನು "ಕಲ್ಯಾಣದ ಕ್ರಾಂತಿ" ಕಾದಂಬರೀ ಮಾಲೆಯ ರಚನೆಯಲ್ಲಿ ತೊಡಗಿದ್ದಾಗ, ಜನಪ್ರಿಯ "ಪ್ರಜಾವಾಣಿ" ಪತ್ರಿಕೆಯ ಸಂಪಾದಕರ ಒತ್ತಾಯದಿಂದ ಅಲ್ಲಮನ ಹುಟ್ಟು, ಬೆಳವಣಿಗೆ, ಸಿದ್ಧಿ, ಸಾಧನೆ ಗಳನ್ನು ರೂಪಿಸುವ "ಪ್ರಭುದೇವ" ಕಾದಂಬರಿಯನ್ನು ರಚಿಸಿದೆ; ಅದು ಪ್ರಜಾವಾಣಿ ಸಾಪ್ತಾಹಿಕ ಪುರವಣಿಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ಅನಂತರ ಪುಸ್ತಕರೂಪದಲ್ಲಿ ಅವತರಿಸಿತು. ಪ್ರಥಮ ಮುದ್ರಣದ ಪ್ರತಿಗಳು, ಮುಗಿದು ವರ್ಷಗಳು ಸಂದಿದ್ದರೂ, ದುಬಾರಿ ಕಾಗದ ಮುದ್ರಣಗಳ ಫಲವಾಗಿ ಮರೆಯಲ್ಲಿದ್ದ "ಪ್ರಭುದೇವ" ಕಳೆದವರ್ಷ ಬೆಂಗಳೂರು ವಿಶ್ವವಿದ್ಯಾನಿಲಯದ ಕೃಪೆಯಿಂದ ಹೊಸ ಆಯಾಮ ಕಂಡುಂತಾಗಿ ಅಸಕ್ತರ ಗಮನ "ಪ್ರಭುದೇವ" ನಾಟಕದ ಕಡೆ ತಿರುಗುವಂತಾಯಿತು. ಅದರ ಫಲ ಈಗ ನಿಮ್ಮ ಮುಂದಿದೆ.

ಚಾವರಸನ ಕೃತಿಯನ್ನು "ಬೂರ್ಜ್ವಾ" "ರೋಮ್ಯಾಂಟಿಕ್" ಎಂದು ಹೆಸರಿಸಿ ಹೀಗಳೆಯುವುದನ್ನು ಕುರಿತು ಎರಡು ಮಾತು ಅನಿವಾರ್ಯ. ಸಾಹಿತ್ಯದಲ್ಲಿ "ರೊಮ್ಯಾಂಟಿಕ್" ರಮ್ಯ ಪಂಥದ ಕಾಲ ಮುಗಿದು ಮಣ್ಣಿನ ವಾಸನೆಯ "ವಾಸ್ತವಿಕತೆ" ಪ್ರಾರಂಭವಾಗಿದೆ ಎನ್ನುವವರು, ಜಗತ್ತಿನ ಎಲ್ಲ ಬಗೆಯ ಸೃಜನಾತ್ಮಕ ಕ್ರಿಯೆಗಳ ಪ್ರಚೋದಕ ಶಕ್ತಿಯು, ಪ್ರಗತಿಗೆ ಸಹಾಯಕ ವಾದ ರೊಮ್ಯಾಂಟಿಕ್ ಭಾವನೆಯೇ ಎಂಬುದನ್ನು ಮರೆಯುತ್ತಾರೆ. ರಮ್ಯ ಸತ್ತಿಲ್ಲ, ಸಾಯುವುದೂ ಇಲ್ಲ, ಶತರೂಪಾ ಶಕ್ತಿದೇವತೆಯಂತೆ ಅದು ಆಯಾ ಕಾಲಕ್ಕೆ ಅನುಗುಣ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ನವೋದಯ, ನವ್ಯ, ದಲಿತ, ಬಂಡಾಯ ಇವೆಲ್ಲ ರಮ್ಯ ಸಂಪ್ರದಾಯದ ಆಧುನಿಕ ರೂಪಗಳೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಎನ್ನುವವರೂ ಇದ್ದಾರೆ. ಸಮಾಜವಾದದಿಂದ "ಮಿಸ್ಟಿಸಿಸಿಂ" (ಅಧ್ಯಾತ್ಮ ರಹಸ್ಯ) ದ ವರೆಗಿನ ಎಲ್ಲ ವಾದಗಳನ್ನು ವೈಜ್ಞಾನಿಕ ದೃಷ್ಟಿಯಿಂದ ವಿಮರ್ಶಿಸಿದ ವಿಖ್ಯಾತ ಲೇಖಕ Colin Wilson ಇವರು ಹೇಳುವುದನ್ನು ಕೇಳಿ;

The interesting thing is that romanticism has not diedout. It is more alive than it was in 1850. Moreover, it is no longer confined to a few hundred—or thousands—of poets and intellectuals. Modern Romantics could be counted in millions. Many of them are not particularly intelligent, many are as self-distructive as their nineteenth-century counterparts. Some regard themselves as liberals, some as mystics and occultists, some merely as rebels who want to do their own thing. All share a common recognition; that what really concerns them is freedom; not merely physical freedom, but inner freedom.

Mysteries, P: 628.

" ಕುತೂಹಲಕಾರಿ ವಿಷಯವೆಂದರೆ Romanticism = ರಮ್ಯವಾದ ಈಗಲೂ ಸತ್ತಿಲ್ಲ ಎಂಬುದು. 1850 ರಲ್ಲಿ ಇದ್ದುದಕ್ಕಿಂತ ಅದು ಈಗ ಹೆಚ್ಚು ಜೀವಂತವಾಗಿದೆ. ಅಷ್ಟೇ ಅಲ್ಲ ಹಿಂದಿನಂತೆ ಅದು ಕೆಲವೇ ನೂರು ಅಥವಾ ಸಾವಿರ ಮಂದಿ ಕವಿಗಳಿಗೆ ಬುದ್ಧಿಜೀವಿಗಳಿಗೆ ಸೀಮಿತವಾಗಿಲ್ಲ. ಆಧುನಿಕ ರಮ್ಯವಾದಿಗಳನ್ನು ಮಿಲಿಯ (ದಶಲಕ್ಷ) ಸಂಖ್ಯೆಯಲ್ಲಿ ಎಣಿಸಬೇಕಾಗಿದೆ ಈಗ. ಅವರಲ್ಲಿ ಅನೇಕರು ಹೇಳಿಕೊಳ್ಳಬಹುದಾದಷ್ಟು ಬುದ್ಧಿವಂತರೂ ಅಲ್ಲ, ಕೆಲವರು ಹತ್ತೊಂಭತ್ತನೆ ಶತಮಾನದ ತಮ್ಮ ಪೂರ್ವಿಕರಂತೆ ಆತ್ಮಘಾತುಕರು, ಕೆಲವರು ಸಮಾಜವಾದಿ ಉದಾರಿಗಳು, ಇನ್ನು ಕೆಲವರು ಅನುಭಾವಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳು, ಅಧ್ಯಾತ್ಮರಹಸ್ಯವಾದಿಗಳು, ಇನ್ನು ಕೆಲವರು ಬಂಡಾಯಗಾರರೆಂದು ಹೇಳಿಕೊಂಡು ಎಲ್ಲವನ್ನೂ ತಮ್ಮ ಇಚ್ಛೆಯಂತೆ ಮಾಡುವವರು. ಇವರೆಲ್ಲರಿಗೂ ಅನ್ವಯವಾಗುವ "ಗುರುತಿನ ಪಟ್ಟಿ, ವಾಸ್ತವವಾಗಿ ಅವರು ಇಚ್ಛಿಸುತ್ತಿರುವ ಸ್ವಾತಂತ್ರ್ಯ. ಕೇವಲ ಪ್ರೈಹಿಕ ಸ್ವಾತಂತ್ರ್ಯವಲ್ಲ ಅಂತರಂಗದ ಅಧ್ಯಾತ್ಮಿಕ ಸ್ವಾತಂತ್ರ್ಯ."

ಭಾರತದ ತತ್ವಶಾಸ್ತ್ರ ಭಗವದ್ಗೀತೆಗಳಿಂದ ಪ್ರಭಾವಿತನಾದ ಕಾಲಿನ್ಸನು ಕೊನೆಯಲ್ಲಿ ಸರ್ವರೋಗನಿವಾರಕವೆಂದು ಅಧ್ಯಾತ್ಮದ ಕಡೆ ತಿರುಗಿದ್ದರಲ್ಲಿ ಅಚ್ಚರಿಯಿಲ್ಲ. ಮೂರು ಸಹಸ್ರ ವರ್ಷಗಳ ಹಿಂದೆಯೇ ನಮ್ಮ ಪೂರ್ವಜರು ಮನುಕುಲದ ಶ್ರೇಯಪ್ರೇಯಗಳೆಂದರೆ ಅಧ್ಯಾತ್ಮಿಕ ಜಿಜ್ಞಾಸೆಯೇ ಎಂಬುದನ್ನು ಮುಕ್ತಕಂಠದಿಂದ ಸಾರಿದ್ದಾರೆ. ಆ ತತ್ವವನ್ನೇ ಕೂಲಂಕಷವಾಗಿ ಅನನ್ಯವಾಗಿ ಬಿತ್ತರಿಸುವ ಸೂಳ್ನುಡಿ ಇದು;

ನ ವಾ ಅರೇ, ಸರ್ವಸ್ಯಕಾಮಾಯ ಸರ್ವಂಪ್ರಿಯಂ ಭವತಿ,
ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ।
ಆತ್ಮಾ ವಾ ಅರೇ, ದ್ರಷ್ಟವ್ಯಃ ಶ್ರೋತವ್ಯೋ ಮಂಥವ್ಯೋ
ನಿಧಿಧ್ಯಾಸಿತವ್ಯಃ ॥

"ಬೃಹದಾರಣ್ಯಕೋಪನಿಷತ್ 2, 4, 5"

ಯಾಜ್ಞವಲ್ಕ್ಯ ಮೈತ್ರೇಯಿಗೆ ಹೇಳುತ್ತಿದ್ದಾನೆ: "ಎಲ್ಲ ವಸ್ತುಗಳೂ ಅವುಗಳ ಸ್ವಂತ ಗುಣಗಳಿಂದ ಅಪೇಕ್ಷಣೀಯವಾಗುವುದಿಲ್ಲ, ಆತ್ಮತತ್ವದ ಅಪೇಕ್ಷೆಯಿಂದ ಅಪೇಕ್ಷಣೀಯವೆನಿಸುತ್ತವೆ. (ಈ ಕಾರಣದಿಂದಲೇ, ಆತ್ಮತತ್ವದ ದರ್ಶನಕ್ಕಾಗಿ ಹೆಣಗಬೇಕು. ಆತ್ಮನನ್ನು ಕುರಿತ ಮಾತುಗಳನ್ನು ಕೇಳಬೇಕು, ಮನನ ಮಾಡಬೇಕು, ಮನಸ್ಸಿನ ಏಕಾಗ್ರತೆಯಿಂದ ನಿಧಿನ್ಯಾಸ ಯೋಗದಲ್ಲಿ ರೂಢಿಸಬೇಕು."

ಕವಿಯನ್ನು ದ್ರಷ್ಟಾರನೆಂದೂ, ಬುದ್ಧಿಜೀವಿಯನ್ನು ಜಿಜ್ಞಾಸುವೆಂದೂ ನಿರ್ದೇಶಿಸುವ ಶ್ರುತಿಗಳು, ಸಮಾಜದ ಹಾಗೂ ದೇಶದ ಏಗುಹೋಗುಗಳ ವಿಚಾರದಲ್ಲಿ ಮೇಲಿನ ಎರಡು ವರ್ಗಗಳ ಹೊಣೆಯೇನೆಂಬುದನ್ನು ಸೂಚಿಸು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತವೆ. "ಉದ್ಧರೇತ್ ಆತ್ಮನಾ ಆತ್ಮಾನಂ" ಎಂಬ ಗೀತಾವಾಕ್ಯದಂತೆ ಆತ್ಮನಿಂದ ಆತ್ಮನನ್ನು ಉದ್ಧರಿಸಿಕೊಳ್ಳುವ ಕವಿ–ಜಿಜ್ಞಾಸು ದೇಶ ಸಮ್ರಾಜ್ಯಗಳನ್ನು ಉದ್ಧರಿಸಲು ಶಕ್ತನಾಗುತ್ತಾನೆ. ಸರ್ವಕಾಲಿಕ ಸತ್ಯವೆನಿಸಿದ ಈ ಮಾತು ಲೇಖನಿ ಹಿಡಿದ ಕವಿ–ಜಿಜ್ಞಾಸುಗಳಿಗೆಲ್ಲ ಅನ್ವಯಿಸುತ್ತದೆ.

ಕನ್ನಡದ ಯಾಜ್ಞವಲ್ಕ್ಯ ಡಿ.ವಿ.ಜಿ ಇವರ "ಮಂಕುತಿಮ್ಮನ ಕಗ್ಗ"ದ ಈ ನುಡಿ ನೆನಪಿರಲಿ.

" ಪರಮ ಲಾಭವ ಗಳಿಸೆ ಜೀವಿತ ವ್ಯಾಪಾರ
ತಿರಬೇಕು ಮೂಲಧನ,—ಅದು ತತ್ವದೃಷ್ಟಿ."

" ಪ್ರಭುದೇವ " ನಾಟಕ—ಕಾದಂಬರಿಗಳಲ್ಲಿ ಪರಿಮಿತವಾಗಿ, ಪ್ರಭುಲಿಂಗಲೀಲೆಯಲ್ಲಿ ವಿಸ್ತಾರವಾಗಿ, ಆತ್ಮಾನುಸಂಧಾನದ ಹೆದ್ದಾರಿಯ ಮಜಲುಗಳನ್ನು ಅನುಭಾವಿಗಳು ಗುರುತಿಸಿದ್ದಾರೆ. ಮಾನ್ಯ ನಾಚಕರ ಗಮನವನು ಚಾಮರಸನ ಕೃತಿಯತ್ತ ಸೆಳೆಯುವುದೇ ಮೇಲಿನ ಎರಡು ರಚನೆಗಳ ಪರಮೋದ್ದೇಶ. ಈ ದಿಶೆಯಲ್ಲಿ ಪ್ರೇರಣೆ ಪ್ರೋತ್ಸಾಹಗಳನ್ನಿತ್ತ ಬೆಂಗಳೂರು ಆಕಾಶವಾಣಿ, ಪ್ರಜಾವಾಣಿ ವ್ಯವಸ್ಥಾಪಕರು, ಬೆಂಗಳೂರು ವಿಶ್ವವಿದ್ಯಾನಿಲಯ, ಇವರಿಗೆಲ್ಲ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರು
೧–೪–೧೯೮೧

ಬಿ. ಪುಟ್ಟಸ್ವಾಮಯ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತ್ರಗಳು

ಶಿವ—ಪಾರ್ವತಿ

ಅಲ್ಲಮ	ಪ್ರಭುದೇವ
ಮುಮುಕ್ಷಾರ	ಬನವಸೆಯ ಅರಸು
ಸಿದ್ಧರಾಮ	
ಬಸವಣ್ಣನವರು	
ಮಾಯೆ	ರಾಜಪುತ್ರಿ
ಮೋಹಿನಿ	ಬನವಸೆಯ ರಾಣಿ
ಸಕಲೆ ಮದಮಾಸಿ	ಸಖಿಯರು
ನಿಮಲೆ	ದೇವಕನ್ಯೆ
ಮಹಾದೇವಿ	

ದಾಸಿಯರು, ಪರಿಜನರು, ಕಲ್ಲುಟಿಗರು,
ಜಂಗಮರು, ಇತ್ಯಾದಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಭುದೇವ

ಅಂಕ ೧

ಬನವಸೆಯಲ್ಲಿ ಮಧುಕೇಶ್ವರ ದೇವಾಲಯದ ನವರಂಗ

[ರಾಜನ್ಯರು, ಸಾಮಾಜಿಕರು, ಅಂತಃಪುರ ವಾಸಿನಿಯರು ದೇವಾಲಯದ ಎಲ್ಲ ಕಡೆ ನಿಂತು ಮಾಯೆಯ ನರ್ತನವನ್ನು ನೋಡುತ್ತಿದ್ದಾರೆ. ನರ್ತನ ಮುಗಿಯುತ್ತಿದ್ದಂತೆ ಮದಮಾನಿ ಮತ್ತು ಸಕಳೆ ಮಾತಾಡುತ್ತ ಬರುತ್ತಾರೆ.]

ಮದಮಾನಿ—ಜಾಗ್ರತೆ ಮಾಡು ಸಕಳೆ. ನಾಟ್ಯ ಸೇವೆ ಮುಗಿಯಿತು. ಇನ್ನೇನು ರಾಜಕುಮಾರಿ ಅರಮನೆಗೆ ಹೊರಡುತ್ತಾಳೆ.

ಸಕಳೆ—ನಾನು ಬೇಕೆಂದು ತಡಮಾಡುತ್ತಿರುವೆನೇ ಮದಮಾನಿ. ಈ ದಿನ ದೇವಸ್ಥಾನದಲ್ಲಿ ಇಷ್ಟೊಂದು ಗದ್ದಲವೆಂದು ಯಾರಿಗೆ ತಿಳಿದಿತ್ತು ? ಗವಾಕ್ಷ ರಂಧ್ರಗಳನ್ನು ನೋಡು. ಮೃತ್ತಿಕೆಯ ಮಾಟದ ಪುತ್ತಲಿಗಳನ್ನು ದೇಗುಲದ ಗೋಡೆಗೆ ಕೀಲಿಸಿದಂತೆ ನೋಡುತ್ತಾ ನಿಂತಿದೆ ಜನ!

ಮದ—ರಾಜನ ಮಗಳು ನರ್ತಿಸಿದರೆ ಜನ ನೋಡಬರುವುದಿಲ್ಲವೇ! ಅದೂ ಎಂತಹ ನರ್ತನ! ದೇವಲೋಕದ ಅಪ್ಸರೆಯರೂ ಭೂಮಿಗಿಳಿದು ನಮ್ಮ ಒಡತಿಯಿಂದ ಸಂಗೀತ ನರ್ತನಗಳನ್ನು ಕಲಿಯಬೇಕು.

ಸಕಳೆ—ಒಡತಿಯೆಂಬ ಅಭಿಮಾನ ನಿನ್ನನ್ನೀ ರೀತಿ ನುಡಿಸುತ್ತಿದೆ. ರಾಜಕುಮಾರಿಯ ನರ್ತನವನ್ನು ಜನರು ಹಿಂದೆ ಅನೇಕ ಸ್ಸಾರಿ ನೋಡಿದ್ದಾರೆ. ಇಂದಿನ ಜನಸಂದಣಿಗೆ ಮತ್ತೇನೋ ವಿಶೇಷ ಕಾರಣವಿರಬೇಕು.

ಮದ—ಕಾರಣವಿದೆ ಸಕಳೆ. ಇಂದು ವಸಂತ ಪೂರ್ಣಿಮೆ. ನಾಡಿನ ಎಲ್ಲಾ ಕಡೆಗಳಿಂದಲೂ ಗಾಯಕರು, ಕಲಾವಿದರುಗಳು ಮಧುಕೇಶ್ವರನಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಗೀತ ಸೇವೆ ಸಲ್ಲಿಸಲು ಬಂದಿದ್ದಾರೆ. ಅವರಲ್ಲಿ ಯಾರು ಸರ್ವಶ್ರೇಷ್ಠರೋ ಅವರಿಗೆ ಬಹುಮಾನ ಕೊಡುವರಂತೆ. ನೋಡು, ಆಗಲೆ ಪ್ರಾರಂಭವಾಗಿದೆ ಸ್ಪರ್ಧೆ.

(ನವರಂಗದಲ್ಲಿ ಸಂಗೀತ-ವಾದ್ಯ ಸ್ಪರ್ಧೆ ಪ್ರಾರಂಭವಾಗಿದೆ. ಅಲ್ಲಮನ ಮೃದಂಗ ವಾದನ ಎಲ್ಲರ ಗಮನವನ್ನೂ ಆವನ ಕಡೆಗೆ ಸೆಳೆಯುತ್ತದೆ.)

ಮದ—ಆ ಮದ್ದಲಿಗ ಎಷ್ಟು ಚೆನ್ನಾಗಿ ಮೃದಂಗ ನುಡಿಸುತ್ತಿದ್ದಾನೆ! ಕೇಳುವ ಕಿವಿಗಳು ತಾಳಲಯದಿಂದ ಕುಣಿಯುತ್ತಿವೆ.

ಸಕಳೆ—(ಮದ್ದಲಿಗನನ್ನು ಸ್ವಲ್ಪಕಾಲ ದಿಟ್ಟಿಸಿ ನೋಡಿ) ಎಡದ ಕಿವಿಯಲ್ಲಿ ಮೆರೆವ ರತ್ನದ ಕಡಕು, ಬಲದ ಕಿವಿಯಲ್ಲಿ ಚೆನ್ನದ ಸರಪಳಿಯ ಬಾವುಲಿ, ಮುಡಿಯಲ್ಲಿ ಹೂ ಮಾಲೆ, ಹಣೆಯಲ್ಲಿ ಬೆಡಗಿನ ಚುಕ್ಕೆ ಬೊಟ್ಟು, ಕೊರಳಲ್ಲಿ ಮುತ್ತಿನ ಹಾರ, ಬಾಹುಪೂರ ಬೆರಳಿನುಂಗುರಗಳ ವಿಲಾಸ! ಇವ ನನ್ನು ನೋಡಿದರೆ ಯಾರೋ ಧೂರ್ತನಂತೆ ಕಾಣುತ್ತದೆ ಗೆಳತಿ.

ಮದ—ಕಲಾವಿದರೆಲ್ಲರೂ ಧೂರ್ತರೇ. ಕಲೆಯು ಸುವರ್ಣಪ್ರಾಸಾದ ಧೂರ್ತತೆಯ ಅಸ್ತಿವಾರದ ಮೇಲೆ ಕಟ್ಟಲ್ಪಡುವುದೆಂದು ಕೇಳಿದ್ದೇನೆ.

ಸಕಳೆ—ಸುಮ್ಮನಿರು, ಮದಮಾನಿ. ರಾಜಕುಮಾರಿ ಬರುತ್ತಿದ್ದಾಳೆ.

(ಮಾಯೆ ಪ್ರವೇಶಿಸಿ ನವರಂಗದಲ್ಲಿ ನಡೆಯುತ್ತಿರುವ ವಾದ್ಯಗೋಷ್ಠಿಯ ಸಂಗೀತವನ್ನು ಕ್ಷಣಕಾಲ ಆಸಕ್ತಿಯಿಂದ ಕೇಳುತ್ತ ನಿಂತಿದ್ದು ಬಳಿಕ ಸಖಿಯರ ಹತ್ತಿರ ಬರುತ್ತಾಳೆ)

ಮಾಯೆ—ಜೀವವಿಲ್ಲದ ಮರದ ತುಂಡಿನಲ್ಲಿ ಎಂತಹ ಮಾರ್ದವ! ಎಂತಹ ಪಲಕು ಪಡಿ!.....ಸಖಿ, ಆ ಮದ್ದಲಿಗನಾರು ತಿಳಿದು ಬಾ.

ಮದ—ಆಜ್ಞೆ ರಾಜಕುಮಾರಿ. (ಹೋಗುವಳು)

ಮಾಯೆ—ನಾದದ ನೆಲೆ ಮೃದಂಗದಲ್ಲಿ. ನಟರಾಜ ಪರಶಿವನ ಕೈಯ ಡಮರುಗ ಧ್ವನಿ ಸಪ್ತಸ್ವರಗಳನ್ನು ಸೃಷ್ಟಿಸಿತೆಂದು ಕೇಳಿದ್ದೇನೆ. ಆ ನಾದ ಬ್ರಹ್ಮವನ್ನು ಸೆರೆ ಹಿಡಿದು ತಂದಂತಿದೆ ಈ ಅಪರಿಚಿತನ ಮೃದಂಗ ವಾದನ.

ಸಕಳೆ—ನೀನು ತಿಳಿದು ಬಾ ಎಂದು ಕಳುಹಿಸಿದರೆ ಮದಮಾನಿ ಮದ್ದಲಿಗನನ್ನೇ ಸಂಗಡ ಕರೆದು ತಂದಳು ರಾಜಕುಮಾರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

(ಮದಮಾನಿ ಮದ್ದಲಿಗನಂತೆ ವೇಷ ಧರಿಸಿದ ಅಲ್ಲಮನನ್ನು ಕರೆದುಕೊಂಡು ಬರುವಳು.)

ಮದ—ಕ್ಷಮಿಸು, ರಾಜಕುಮಾರಿ. ನಾನು ದಾಸಿಯರಿಗೆ ಪರಿಚಯ ಹೇಳುವುದಿಲ್ಲ, ಬೇಕಾದರೆ ನಿಮ್ಮೊಡತಿಯೇ ಕರೆಸಿ ಕೇಳಲಿ ಎಂದು ಹೇಳಿದ್ದರಿಂದ ಈತನನ್ನು ತಮ್ಮ ಸನ್ನಿಧಾನಕ್ಕೆ ಕರೆತಂದೆ.

ಮಾಯೆ—(ಅಲ್ಲಮನೊಡನೆ) ಸಖಿಯ ಅವಿನಯವನ್ನು ಕ್ಷಮಿಸಿರಿ. ಕಾರ್ಮುಗಿಲ ದನಿಯನ್ನು ಕವಿಯಾರೆ ಕೇಳುವ ಸೋಗೆಯಂತೆ ನಿಮ್ಮ ಮದ್ದಲೆಯ ದನಿ ಕೇಳಿ ಆನಂದಿಸಿದೆವು ನಾವು. ಇಂತಹ ಶ್ರೇಷ್ಠ ಕಲಾವಿದರ ಪರಿಚಯ ಮಾಡಿಕೊಳ್ಳುವ ಕುತೂಹಲ ಅನುಚಿತವೆಂದು ನೀವು ಭಾವಿಸದಿದ್ದರೆ.... (ಅರ್ಧೋಕ್ತಿಯಲ್ಲಿ ನಿಲ್ಲುವಳು)

ಅಲ್ಲಮ—ಕಲೆಯ ಹೃದಯವನ್ನು ಕಲಾವಿದರು ಅರಿಯ ಬಲ್ಲರು, ರಾಜಕುಮಾರಿ. ನಿಮ್ಮ ಗಾನ ಮಾಧುರಿ, ಲಾಸ್ಯ ಕೌಶಲ ಜನರನ್ನು ಮರುಳು ಗೊಳಿಸಿದೆ. ಈ ಗಾನ ಸರಸ್ವತಿಯ ಸಮ್ಮುಖದಲ್ಲಿ ಈ ಅಪರಿಚಿತನ ವಿದ್ಯೆ....

ಸಕಳೆ—ಸೌಜನ್ಯವು ಶ್ರೇಷ್ಠತೆಯ ಕುರುಹು, ಅಪರಿಚಿತನೆ. ನೀವು ಯಾರು ಎಂಬುದನ್ನು ತಿಳಿಯಲು ನಮ್ಮೊಡತಿ ಅಪೇಕ್ಷಿಸುತ್ತಾಳೆ.

ಅಲ್ಲಮ—ಒಡತಿಗಿಂತ ಸಖಿಯರು ಹೆಚ್ಚು ಆತುರರಾಗಿರುವಂತಿದೆ. ಆದರೆ ಏನೆಂದು ಹೇಳುವುದು ನನ್ನ ಪರಿಚಯವನ್ನು. ಪರದೇಶಿ ನಾನು. ಹೆಸರು ಅಲ್ಲಮನೆಂದು. ದೇಶಾಟನೆ ಮಾಡುತ್ತ ಬನವಸೆಯ ವೈಭವವನ್ನು ನೋಡಲು ಬಂದೆ.

ಮದ—ಮುಂದೆ ಎಲ್ಲಿ ಹೋಗುವಿರಿ ?

ಅಲ್ಲಮ—ವಾಸವಿಲ್ಲದವರಿಗೆ ನಿಂತಲ್ಲಿಯೇ ವಾಸ. ಸುಖವಾಸದ ಅಭಿಲಾಷಿ ನಾನು. ಬನವಸೆ ಸೊಗಸಿದರೆ ಇಲ್ಲಿಯೇ ನಿಲ್ಲುತ್ತೇನೆ. ಇಲ್ಲವೆ ಕಾಲು ಎತ್ತ ಕಡೆ ಎಳೆದರೆ ಅತ್ತ ಕಡೆ ಹೋಗುತ್ತೇನೆ.

ಮದ—ನೀನಿಲ್ಲಿಯೇ ಇದ್ದು ನಮ್ಮೆಲ್ಲರಂತೆ ಒಡತಿಯ ಸಮ್ಮುಖದಲ್ಲಿ ಬಲ್ಲ ವಿದ್ಯೆಗಳ ಬೆಳಗಲೆಂಬುದು ನನ್ನ ಬೇಡಿಕೆ. ನಿನಗೆ ಒಪ್ಪಿಗೆಯೇ ?

Sri Vidyabharathi Book Centre, Shringeri

CC-O. In Public Domain. Digitized by eGangotri

ಅಲ್ಲಮ—ರಾಜಾಜ್ಞೆ ಒಪ್ಪಿಗೆಗಾಗಿ ಕಾಯುವುದೇ? ನಿಮ್ಮೊಡತಿ ಅಪೇಕ್ಷಿಸಿದರೆ ರಾಜಾತಿಥಿಯಾಗಿ ಕೆಲವು ದಿನಗಳು ಮಾತ್ರ ಬನವಸೆಯಲ್ಲಿ ನಿಲ್ಲುತ್ತೇನೆ.

ಮಾಯೆ—ಮದಮಾನಿ ನನ್ನ ಅಭಿಮತದಂತೆ ನುಡಿದಳು, ಅಲ್ಲಮ ದೇವ. ಕೊಳ್ಳಿರಿ ಈ ವೀಳೆಯವನ್ನು.

(ಸಖಿಯ ಕೈಯಿಂದ ವೀಳೆಯವನ್ನು ತೆಗೆದು ಅಲ್ಲಮನಿಗೆ ಕೊಡುವಳು.)

೨

ಕನ್ಯಾಂತಃಪುರದಲ್ಲಿ ಮಾಯೆಯ ಓಲಗಶಾಲೆ

[ಅಲ್ಲಮ ಮೃದಂಗ ವಾದನದ ಕೌಶಲ ತೋರುತ್ತಿದ್ದಾನೆ. ಮಾಯೆ ಸುಖಾಸನದಲ್ಲಿ. ಸಖಿಯರು ಸುತ್ತಲೂ ನಿಂತಿದ್ದಾರೆ. ವಾದನ ಮುಗಿಯುತ್ತಿದ್ದಂತೆ ಸಖಿಯರು ಒಬ್ಬೊಬ್ಬರಾಗಿ ಹೊರಗೆ ಹೋಗುತ್ತಾರೆ.]

ಮಾಯೆ—ತಾಳದ ಉಗಮ, ಪ್ರಸ್ತಾರ, ಉಪಸಂಹಾರಗಳ
ಸುಳುವನ್ನು ನಿಮ್ಮಿಂದ ತಿಳಿದೆ, ಅಲ್ಲಮದೇವ.
ನೀವು ಬಂದೆಮ್ಮ ಮನದ ಕತ್ತಲೆಯ ಕಳೆದಿರಿ.
ನಿಮಗೆ ನಾನೇನು ದಕ್ಷಿಣೆ ಕೊಡಲಿ.

ಅಲ್ಲಮ—ಮನದೊಳಗೆ ಮನವಾಗಿ, ಮನದ ಕತ್ತಲೆಯ
ಕಳೆದ ಗುಹೇಶ್ವರ ಲಿಂಗವನರಿವುದೇ
ನನಗೆ ನೀನು ಕೊಡಬಹುದಾದ ಗುರುದಕ್ಷಿಣೆ.
ಬನವಸೆಗೆ ನಾನು ಬಂದ ಕಾರಣ ಮುಗಿಯಿತು.
ಇನ್ನು ನಾನು ಹೋಗುತ್ತೇನೆ, ಮಾಯೆ.

ಮಾಯೆ—ನೀವು ಬಂದು ಕೆಲವು ದಿನಗಳೂ ಕಳೆದಿಲ್ಲ.
ಆಗಲೆ ಹೋಗುವಿರಾ! ಬಿಡಲಾರೆ ನಿಮ್ಮ ನಾನು.

ಅಲ್ಲಮ—ನನ್ನನ್ನು ತಡೆಯಲು ಪ್ರಯತ್ನಿಸಬೇಡ ರಾಜಪುತ್ರಿ.
ಗಾಳಿಯ ತಡೆದವರುಂಟೆ? ಬೆಂಕಿಯ ಕಟ್ಟಿದವರುಂಟೆ?
ಸುಟ್ಟು ನಾಶವಾಗುವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಯೆ—(ನಕ್ಕು) ಜಗವ ತೊರೆದ ಜೋಗಿಯಂತೆ ನುಡಿಯುವಿರಿ!
ಮಾಯೆಯ ಬಲುಮೆಯನೇನ ಬಲ್ಲಿರಿ ನೀವು ?
ನಾನು ಬಯಸಿದರೆ ಕಂಗಳ ಪಾಶದಿಂದ
ನಿಮ್ಮನ್ನು ಕಟ್ಟಬಲ್ಲೆ.
ಮುಂಗುರುಳ ಚಲನದಿಂದ ನಿಲ್ಲಿಸಬಲ್ಲೆ.
ತೋರಬೆರಳನಾಡಿಸಿ ಆಳಬಲ್ಲೆ.

ಅಲ್ಲಮ—(ಮಾಯೆಗಿಂತ ಗಟ್ಟಿಯಾಗಿ ನಕ್ಕು)
ತೆರಣಿಹುಳು ತಾನು ಕಟ್ಟಿದ ಗೂಡಿನಲ್ಲಿ
ತಾನೇ ಸೆರೆಯಾಗಿ ತನ್ನ ತಾನೇ ಮರೆತಂತಿದೆ
ನಿನ್ನ ಗತಿ. ಮಾಯಾತೀತನನ್ನು ಮಾಯೆ
ಬಂಧಿಸಬಲ್ಲುದೆ ? ಮೋಹದ ಮರುಳು
ಹಿಡಿದಿದೆ ನಿನ್ನನ್ನು, ನಾರಿ.

ಮಾಯೆ—ಮರುಳು ! ಮರುಳು !

(ವಿಕೃತವಾಗಿ ನಕ್ಕು ಕೋಪದಿಂದ ಕಾಲಗೆಜ್ಜೆಗಳನ್ನು ತೆಗೆದು ಬಿಸುಟು ಹೋಗುವಳು.)

ಅಲ್ಲಮ—ನಿನ್ನ ಅವಿವೇಕಕ್ಕೆ ನಾನೇನು ಮಾಡಲಿ !
ಕಂಗಳ ಮುಂದಣ ಕನಸು,
ಹಿಂಗದ ತುಂಬಿಯ ಪರಿಮಳ,
ಅಂಗವಿಲ್ಲದ ರೂಪಿಂಗೆ ಸಂಗ ಉಂಟೆ ?
ಗಗನದ ಹಣ್ಣನೆ ಕೊಯ್ದು
ಮುಗುದೆ ರುಚಿಯನರಿಯಳು !
ಹಗರಣದ ಅಹಂಮಾವಿನ ಹಯನು
ಸಯವಪ್ಪುದೇ ಗುಹೇಶ್ವರಾ (ಹೋಗುವನು)

(ಕ್ಷಣಕಾಲ ರಂಗ ಅಂಧಕಾರವಾಗಿ ಚಿಂತಾಸೂಚಕ ತಂತ್ರೀವಾದ್ಯ ನುಡಿಯುತ್ತಿದ್ದಂತೆ ಬೆಳಕು ಮೂಡಿ ಮಾಯೆ ಪ್ರವೇಶಿಸುವಳು.)

ಮಾಯೆ—ಅಪಮಾನ ! ಅಪಮಾನ !
ಮುದ್ದ ಲಿಗನಿಂದ ರಾಜಕುಮಾರಿಯ ಅಪಮಾನ !

Sri Vidyabharathi Book Centre, Sringeri

CC-O. In Public Domain. Digitized by eGangotri

ಬಯಸಿದುದ ಬೇಡಿ ಬರಿಗೈಯಿಂದ
ಹಿಂದಿರುಗಿದಳು ಮಾಯೆ !
ಈಗೇನ ಮಾಡುವೆನು ?
ಸಮಸಂಪ್ರಾಪ್ತನಲ್ಲದ ಅಲ್ಲಮನನ್ನು
ಒಲ್ಲದೆ ಹೊರದೂಡುವೆನೆ ?
ಸಲ್ಲದುದ ನಾಡಿದನೆಂದು
ಕತ್ತಲೆಯ ಕಾರಾಗಾರಕ್ಕೆ ತಳ್ಳುವೆನೆ ?
ಸ್ನೇಹ, ಕರುಣೆ, ಸೌಜನ್ಯ ಅಡ್ಡ ಬಂದು ನಿಲ್ಲುತ್ತಿವೆ.
ನನ್ನ ಮನದ ಪ್ರೇಮಕಾಮಗಳನ್ನು
ಅಪಹರಿಸಿದ್ದಾನೆ ಆ ಚಲುವ ಮದ್ದಲಿಗ.

(ಮದಮಾಸ, ಸಕಳೆ ಬರುವರು)

ಮದ—ಮದ್ದಲಿಗ ! ಎಲ್ಲಿ ಅವನು ?
ಏನಾಯಿತು ರಾಜಕುಮಾರಿ ?
ಏಕೆ ಏಕಾಂತದಲ್ಲಿ ಚಿಂತಿಸುತ್ತ ಕುಳಿತಿರುವಿರಿ ?

ಸಕಳೆ—ಆ ಅಲ್ಲಮನು ಬಂದಮೇಲೆ
ಒಡತಿಯ ರೀತಿ ಬೇರೆಯಾಗಿದೆ.
ಅಲ್ಲಮನಿಲ್ಲದಿದ್ದರೆ ಅರೆಮುಗಿದ ಪದ್ಮದಂತೆ
ಕೈಯಲ್ಲಿ ಕೆನ್ನೆಯಿಟ್ಟು ಕುಳಿತುಕೊಳ್ಳುತ್ತಾಳೆ.

ಮದ—ದೇವಿ, ಇದೇನು ನಿಮ್ಮ ಮನೋಭಾವ ?
ಕಾಮನ ಕೈಯ ಬಾರಿಯ
ಹೂವಿನಂಬುಗಳಿಂದ ಮಾರ್ಮೊನೆಗೊಂಡಂತೆ
ತೀವಿಕೊಂಡಿದೆ ನಿಮ್ಮ ತನು !
ಆಡಿಪಾಡುವುದಿಲ್ಲ. ನೋಡಿನುಡಿಯುವುದಿಲ್ಲ.
ಬೇವಸದಿಂದ ನಾಚದೆ ನಮ್ಮೊಡನೆ ಹೇಳು.

ಮಾಯೆ—ಏನು ಹೇಳಲಿ ಸಖಿಯರೆ ?
ಆ ಚಲುವ ಮದ್ದಲಿಗ, ಅವನೆನ್ನನು....

(ಅಳುತ್ತ ಅಲ್ಲೆ ಸಿಲ್ಲುವಳು)

Sri Vidyabharathi Book Centre, Sringeri

CC-O. In Public Domain. Digitized by eGangotri

ಮದ—ಏನು ನಿನ್ನಲ್ಲಿ ಅವನ ಅಪರಾಧ ?
ಅಥವಾ ಕೈ ಹುಣ್ಣಿಗೆ ಕನ್ನಡಿಯೇಕೆ ?
ನಿಮ್ಮ ಮನವನು ನಾನು ತಿಳಿದೆ ದೇವಿ.
ಆ ಚಲುವ ಮದ್ದಲಿಗನಿಗೆ ನೀವು ಮೋಹಿಸಿದಿರಿ.
ಯೌವನದ ಅರುಣೋದಯದಲ್ಲಿ ಅರಳಿದ
ಪ್ರಥಮ ಪ್ರೇಮದ ಎಲ್ಲ ಲಕ್ಷಣಗಳೂ
ನಿಮ್ಮಲ್ಲಿ ಕಾಣುತ್ತಿವೆ.

ಸಕಳೆ—ಇದೇನು ನುಡಿ, ಮದಮಾನಿ !
ರಾಜಕುಲದಲ್ಲಿ ಜನಿಸಿದ ನಮ್ಮೊಡತಿಯೆಲ್ಲಿ ?
ಕುಲಗೋತ್ರವರಿಯದ ಆ ಮದ್ದಲಿಗನೆಲ್ಲಿ ?
ರಾಜಹಂಸಿಯೊಡನೆ ಕಾಗೆಯ ಬೇಟವೇ ?
—ದೇವಿ, ನೀನು ಜನಿಸಿದಾಗ ನಿಮ್ಮ ತಂದೆ
ಮಮಕಾರ ಭೂಪಾಲಕನಿಗೆ ಕುಲಗುರು
ಅಹಂಕಾರ ಮುನಿ "ಈ ಕನ್ಯೆಗೆ ಪರಮೇಶ್ವರನು
ಪತಿಯಾಗುವನು" ಎಂದು ಹೇಳಿದನು
ನೆನಪಿರಲಿ ಆ ಭವಿಷ್ಯದ ನುಡಿ.
ಧೂರ್ತ ಮದ್ದಲಿಗನ ಅಪಾತ್ರ ಪ್ರೇಮವನ್ನು
ಮನದಿಂದ ಕಿತ್ತೊಗೆದು ಮಧುಕೇಶ್ವರನಲ್ಲಿ
ನಿಶ್ಚಲ ನಿಷ್ಠೆಯಿಂದ ಭಕ್ತಿಮಾಡು

ಮಾಯೆ—(ಕ್ಷಣಕಾಲ ಚಿಂತಿಸಿ) ಭಕ್ತಿ ! ಭಕ್ತಿ !
ಭಕ್ತಿಯಿಂದ ಪ್ರೇಮ ಫಲಿಸುವುದಿಲ್ಲ ಸಖೀ.
ನಿರಾಕಾರನಾದ ಮಧುಕೇಶ್ವರನು
ಸಾಕಾರನಾಗಿ ಬಂದು ನನ್ನ ಪ್ರೇಮಾರಾಧನೆಯನ್ನು
ಸ್ವೀಕರಿಸುವನೇ ?
ಭಕ್ತಿಯ ಹುಚ್ಚು ಕಳೆಯಿತು.
ಅಲ್ಲಮನನ್ನು ಬಿಟ್ಟು ನಾನು ಜೀವಿಸುವುದಿಲ್ಲ.

Su. Vidyabharathi Book Centre, Sringeri

CC-O. In Public Domain. Digitized by eGangotri

ಸಕಳೆ—ನಿಜವಾಗಿ ಮಾಯೆ ಅಲ್ಲಮನ
ಚೆಲುವು, ಜಾಣ್ಮೆ, ವೈಯಾರಗಳಿಗೆ
ಮಾರುಹೋಗಿದ್ದಾಳೆ. ತನ್ನ ತಾನೇ
ಮರೆತಿದ್ದಾಳೆ. ಈಗ ನಾವು ಮಾಡತಕ್ಕದ್ದೇನು?

ಮುದ—ಸಖಿಯ ರೀತಿ ಚಿಂತಾಜನಕವಾಗಿದೆ, ಗೆಳತಿ.
ಮನದಲ್ಲಿ ಆತುರ, ಬುದ್ಧಿಗೆ ನಾಚಿಕೆ,
ನಡೆಯಲ್ಲಿ ವಿನಯ, ನುಡಿಯಲ್ಲಿ ಅನ್ಯಪ್ರಸಂಗತೆ,
ಕಣ್ಣುಗಳಲ್ಲಿ ಕಳವಳ, ತನುವಿನಲ್ಲಿ ಭೀತಿ,
ಇವೆಲ್ಲ ಸಖಿಯ ವಿರಹೋತ್ಕಂಠತೆಯನ್ನು
ಸೂಚಿಸುವವು.

ಸಕಳೆ—ಏನು ಮಾಡಬೇಕೆಂದು ನಿನ್ನ ಸಲಹೆ?
ಈಗ ನಾವು ಉಪೇಕ್ಷಿಸಿದರೆ ಗೆಳತಿಯ
ಪ್ರಾಣಕ್ಕೇ ಸಂಚಕಾರ ಬರುವುದು.

ಮುದ—ಮಾಡುವುದೇನನ್ನು?
ಸುಧೆಯು ಸೋನೆ ಸುರಿವ ಕಾಲದಲ್ಲಿ
ತೃಪ್ತಿಪಡಲರಿಯದೆ ತೃಷೆಗೆ ತೊಳಲಿ
ಕೋಟಲೆಗೊಂಬ ಮರುಳರೂ ಇರುವರೆ?
ಅಲ್ಲಮನು ಕರುಣಿಸಿದ ಕಾಲದಲ್ಲಿ
ನಿತ್ಯವನರಿಯಲರಿಯದೆ, ಕುದಿದು,
ಕೋಟಲೆಗೊಳ್ಳುತ್ತಿದ್ದಾಳೆ ರಾಜಕುಮಾರಿ.
ಈ ಕುತ್ತಿಗೆ ಸರಿಯಾದ ಮದ್ದು ಅಲ್ಲಮನಲ್ಲಿದೆ.
ನಾನು ಹೋಗಿ ಅವನನ್ನು ವಿಚಾರಿಸುತ್ತೇನೆ.

ಸಕಳೆ—ನೀನು ಹಾಗೇ ಮಾಡು.
ನಾನು ಗೆಳತಿಯ ಶುಶ್ರೂಷೆ ಮಾಡುತ್ತಾ
ಇಲ್ಲಿಯೇ ಇರುತ್ತೇನೆ.

Sri Vidyabharathi Book Centre, Sringeri
(ಮುದಮಾನಿ ಹೋಗುವಳು)

CC-O. In Public Domain. Digitized by eGangotri

೩

ಕನ್ಯಾಂತಃಪುರದ ಮಹಾದ್ವಾರ

[ಮದಮಾಸಿ ಅಲ್ಲಮನನ್ನು ಹಿಂಬಾಲಿಸಿ ಬರುತ್ತಾಳೆ]

ಮದಮಾಸಿ—ನಿಲ್ಲು, ನಿಲ್ಲು, ಧೂರ್ತಮದ್ದ ಲಿಗ !
ಕಾವಲುಗಾರರ ಕಣ್ಣು ಗಳಿಗೆ ಮಣ್ಣೆ ರಚಿ
ಸಂಜೆಯ ನಸುಕಿನಲ್ಲಿ ನುಸುಳಿ ಹೋಗಲು
ಹವಣಿಸುತ್ತಿರುವೆಯೇಕೆ ?

ಅಲ್ಲಮ—ನಾನಿನ್ನು ಬಿಡಾರಕ್ಕೆ ಹೋಗುತ್ತೇನೆ ಮದಮಾಸಿ.
ರಾಜಕುಮಾರಿ ಕೇಳಿದರೆ ಹೇಳಿಬಿಡು.

ಮದ—ನಿನಗಿನ್ನು ಬೇರೆ ಬೀಡಿನ ಮನೆಯೇಕೆ ಅಲ್ಲಮ ?
ನಮ್ಮೊಡತಿಯ ಮೆಚ್ಚಿಗೆ ಪಡೆದೆ.
ಬಿಡಾರದ ಚಿಂತೆ ಬಿಟ್ಟು ಅರಮನೆಯಲ್ಲಿ
ಸುಖವಾಗಿರು.

ಅಲ್ಲಮ—ನಾವು ಪರದೇಸಿಗಳು, ಬಡವರು.
ನೀವು ದೊರೆಗಳು. ನಿಮ್ಮ ದೇವಿ ರಾಜಕುಮಾರಿ
ನಾವು ಪುರುಷರು. ನೀವು ಸತಿಯರು.
ನಿಮ್ಮೊಡನಿರುವುದು ನಮಗೆ ಮರ್ಯಾದೆಯಲ್ಲ.
ದೂರದಲ್ಲಿದ್ದು ಸೇವೆ ಮಾಡುವುದು ಉಚಿತ.

ಮದ—ಮಾಯೆ ನಿನ್ನನ್ನು ಸೇವಕನೆಂದು ತಿಳಿದಿಲ್ಲ.
ನಿನ್ನನ್ನು ತನಗಿಂತ ಮಿಗಿಲು ಮಾಡುವ
ಚಿಂತೆಯಲ್ಲಿದ್ದಾಳೆ ಅವಳು.

ಅಲ್ಲಮ—ಸೇವಕರ ಮೇಲೆ ಅಭಿಮಾನವಿಡುವುದು
ಒಡೆಯರಿಗೆ ಸಹಜ, ಆದರೆ ನಾವು
ಮರೆಯಬಹುದೇ ಸೇವಕಾಂಗದ ಭಾವವನ್ನು ?

ಮದ—ಸಾಕು ನಿನ್ನ ಜಾಣಿನ ಮಾತು, ಅಲ್ಲಮ.
ಇನ್ನು ನಿನ್ನಲ್ಲಿ ಮುಚ್ಚುಮರೆಯೇಕೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಯೆ ನಿನಗೆ ಮನಸೋತು
ಮೋಹೋದ್ರೇಕದಿಂದ ಬಯಸುತ್ತಿದ್ದಾಳೆ.

ಅಲ್ಲಮ—(ನಕ್ಕು) ನೀವೇ ಬಲ್ಲಿರಿ,
ನಿಮ್ಮ ಮಾಯಾದೇವಿಯ ಅಂತಸ್ಥನ್ನು.
ಹೊಸಬರಾದ ನಾವು ಬಲ್ಲೆವೇ ?
ನಿಮ್ಮ ಮನ ಬಂದಂತೆ ನೀವೇ ಮಾಡುವುದು.
ನಮ್ಮನ್ನು ಕೇಳುವುದೇನಿದೆ ?

ಮದ—ಯಾವ ಶಕುನವನ್ನು ನೋಡಿ ಬಂದೆಯೋ
ಭಾವ ? ಅದಾವ ವಶ್ಯ ವಿದ್ಯೆಯನ್ನು ಕಲಿತೆಯೋ ?
ದೇವಿಯನ್ನು ಮರುಳು ಮಾಡಿದೆ.
ಇಂದು ನೀನಿಲ್ಲಿಯೇ ಇರು. ನಾಳಿನ ಕತೆ....
.....ನಾಳೆಗೆ.

(ಇಬ್ಬರೂ ನಗುವರು)

೪

ಕನ್ಯಾಂತಃಪುರದಲ್ಲಿ ಓಲಗಶಾಲೆ.

[ಹಿಂದಿನಂತೆ ಮಾಯೆ ಚಿಂತಿಸುತ್ತ ಕುಳಿತಿದ್ದಾಳೆ. ಸಮೀಪದಲ್ಲಿ ಸಕಳೆ]

ಸಕಳೆ—ಮನದಳಲನ್ನು ಕಳೆ, ರಾಜಕುಮಾರಿ
ಸುಮ್ಮಾನದಿಂದ ನಗುನಗುತ ಮದಮಾನಿ
ಮತ್ತ ಗಜಗತಿಯಿಂದ ಬರುತ್ತಿದ್ದಾಳೆ.

(ಮದಮಾನಿ ಬರುವಳು)

ಮಾಯೆ-- ಏನಾಯಿತೆಂದು ನೀನೇ ಕೇಳು.

ಸಕಳೆ—ಏನು, ನಿನ್ನ ಮುಸುಡ ಜೇಷ್ಠೆ
ಸುಮ್ಮಾನವನ್ನು ಸೂಚಿಸುತ್ತಿದೆ.
ಹೋದ ಕಾರ್ಯವೇನಾಯಿತು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮದ—ಮದಮಾಸಿ ಹೋದಮೇಲೆ ಆಗುವುದೇನು ?
ಅಲ್ಲಮನನ್ನು ಒಡಂಬಡಿಸಿ ಬಂದಿದ್ದೇನೆ.
ಸಕಳೆ—ಈಗ ಅವನೆಲ್ಲಿ ?
ಮದ—ಕನ್ನೆಮಾಡದ ಗುಪ್ತಗೃಹದಲ್ಲಿ.
(ಎಂದು ಸಕಳೆಯ ಕಿವಿಯಲ್ಲಿ ಏನೋ ಹೇಳುವಳು)
ಮಾಯೆ—(ಕೋಪದಿಂದ)
ನಿನ್ನ ಕೆವಿ ಮಾತು ಮುಗಿಸಿ ಏನಾಯಿತೆಂದು
ನನ್ನೊಡನೆ ಹೇಳು ಮದಮಾಸಿ.
ಸಕಳೆ—ನಾನು ನಿಮಗದನ್ನು ತಿಳಿಸುವೆನು ರಾಜಕುಮಾರಿ.
ಕಾರ್ಯ ಸಾಧಿಸಿಕೊಂಡು ಬಂದಿದ್ದಾಳೆ
ಮದಮಾಸಿ. ಸಂಧಾನ ವಿದ್ಯಾಪ್ರವೀಣೆಯೆಂದು
ಬಿರುದುಕೊಟ್ಟು ಗೌರವಿಸಿ ಸನ್ಮಾನಿಸಬೇಕು
ನೀವಿವಳನ್ನು.
ಮಾಯೆ—ಈ ರತ್ನಕಂಕಣ ಮಣಿಹಾರಗಳನ್ನು
ಪಾರಿತೋಷಕವಾಗಿ ತೆಗೆದುಕೊ.
(ಕಡಗ ರತ್ನಹಾರಗಳನ್ನು ತೆಗೆದುಕೊಡುವಳು)
ಮದ—(ತೆಗೆದುಕೊಂಡು) ರಾಜಕುಮಾರಿ,
ಅತಿ ರಹಸ್ಯವಾಗಿ ಯಾರಿಗೂ ತಿಳಿಯದಂತೆ
ನಡೆಯಬೇಕು ಈ ಕಾರ್ಯ. ಕನಿಷ್ಟರಿಗೆ
ಸುಳಿವು ತಿಳಿದರೆ ನಿಮ್ಮ ತಂದೆಗೆ ವರದಿಯಾಗಿ
ದೊಡ್ಡ ಹಗರಣವೇ ಆಗುವುದು.
ಸಕಳೆ—ಆ ವಿಚಾರ ರಾಜಕುಮಾರಿಗೇಕೆ, ಮದಮಾಸಿ ?
ಸುಳಿವು ಬಯಲಾಗದಂತಿರುವುದು ನಮ್ಮ ಹೊಣೆ
ಚತುರತೆಯಿಂದ ನಾನದನ್ನು ನಿರ್ವಹಿಸುವೆನು
—ಇನನುದಯದಿಂದ ತಾವರೆ ಅರಳುವಂತೆ
ನಿನ್ನ ಅಂಗಾಂಗಗಳು ಉತ್ಪುಲ್ಲವಾಗಲಿ.
ಮೇಘ ದರ್ಶನದಿಂದ ಮಯೂರಿ ಹರ್ಷಿತಳಾಗಿ

CC-O. Mumukshu Bhawan Varanasi Collection. Digitized by eGangotri

CC-O. In Public Domain. Digitized by eGangotri

ನಲಿದು ನರ್ತಿಸಲಿ ನಿನ್ನ ಅಂತಃಕರಣಗಳು.
ಷೋಡಶಕಲಾ ಪೂರ್ಣನಾದ ಹುಣ್ಣಿಮೆಯ ಚಂದ್ರನಂತೆ
ತುಂಬಿ ತೋರಲಿ ನಿನ್ನ ಭಾವ ಬಯಕೆಗಳು.

— ತೆರೆ —

೫

ಕನ್ಯಾಂತಃಪುರದಲ್ಲಿ ಮಾಯೆಯ ಶಯ್ಯಾಗೃಹ.

ಮರುದಿನ ಪ್ರಾತಃಕಾಲ.

[ಅಲಂಕರಿಸಿದ್ದ ಪುಷ್ಪಹಾರಗಳು ಹರಿದು ಚಲ್ಲಾಪಿಲ್ಲಿಯಾಗಿ ಬಿದ್ದಿವೆ. ಮಾಯೆ ನೆಲದ ಮೇಲೆ ಮೂರ್ಛಿತೆಯಾಗಿ ಬಿದ್ದಿದ್ದಾಳೆ.

ಮಂಗಳ ವಾದ್ಯ. ಮಾಯೆಯನ್ನು ಎಚ್ಚರಿಸಲು ಬಂದ ಸಕಳೆ ಶಯ್ಯಾಗೃಹದ ದೃಶ್ಯವನ್ನು ಕಂಡು ಚೀತ್ಕಾರ ಮಾಡಿ ಹೊರಗೆ ಬರುತ್ತಾಳೆ.]

ಸಕಳೆ—ಪ್ರಮಾದ! ಪ್ರಮಾದ! ಮದಮಾನಿ, ವಿಲಾಸಿನಿ ಬನ್ನಿರಿ, ಬನ್ನಿರಿ.

(ಮದಮಾನಿ, ವಿಲಾಸಿನಿಯರು ಆವಸರದಿಂದ ಬರುತ್ತಾರೆ)

ಮದ – ಏಕೆ? ಏನಾಯಿತು?

ಸಕಳೆ—ಪ್ರಾತಃಕಾಲ ದೇವಿಯನ್ನೆಚ್ಚರಗೊಳಿಸಲು ನಾನು ಶಯ್ಯಾಗೃಹಕ್ಕೆ ಹೋದಾಗ ಅಲ್ಲಿನ ಸ್ಥಿತಿಯನ್ನು ನೋಡಿ ಚೀತ್ಕಾರ ಮಾಡಿದೆ.

ಮದ—(ಕಾತರದಿಂದ) ಏನಾಯಿತು ದೇವಿಗೆ?

ಸಕಳೆ—ಕುಸಿದ ಬಾಳೆಯ ಗಿಡದಂತೆ ದೇವಿ ನಿಶ್ಚೇಷ್ಟಿತಳಾಗಿ ನೆಲದಲ್ಲಿ ಬಿದ್ದಿದ್ದಾಳೆ. ನಾವು ನಲ್ಮೆಯಿಂದ ಅಲಂಕರಿಸಿದ ಪುಷ್ಪಮಾಲಿಕೆಗಳು ಹರಿದು ಚಲ್ಲಾಪಿಲ್ಲಿಯಾಗಿ ಬಿದ್ದಿವೆ. ಎಲ್ಲಿಯೂ ಅಲ್ಲಮನ ಸುಳಿವಿಲ್ಲ.

ಮದ—ನಡೆಯಿರಿ, ನಡೆಯಿರಿ. ನಿಜವಾಗಿ ಪ್ರಮಾದ!

(ಎಲ್ಲರೂ ಶಯನ ಗೃಹವನ್ನು ಪ್ರವೇಶಿಸುವರು)

ಮದ—ದೇವಿ ಮೂರ್ಛಿತೆಯಾಗಿದ್ದಾಳೆ. ಎಲ್ಲಿ ಪನ್ನೀರು, ಲಾವಂಚದ ಬೀಸಣಿಗೆ.

Sri Vidyabharathi Book Centre, Sringeri

CC-O. In Public Domain. Digitized by eGangotri

(ವಿಲಾಸಿನಿ ಬೀಡಿದ ವಸ್ತುಗಳನ್ನು ತಂದುಕೊಡುವಳು. ಮದಮಾಸಿ ಶುಶ್ರೂಷೆ ಮಾಡುವಳು)

ಮಾಯೆ—(ಜಾಗ್ರತಳಾಗಿ ನಿಟ್ಟುಸಿರಿಟ್ಟು) ಹಾ! ನಾನೆಲ್ಲಿದ್ದೇನೆ?

ಮದ—ಏಕೆ ರಾಜಪುತ್ರಿ? ಏನಾಯಿತು?

ಮಾಯೆ—ಹೂವನ್ನು ದಳದಳವಾಗಿ ಬಿಡಿಸಿ ನೋಡಿದರೆ
ಸುಗಂಧದ ನೆಲೆ ಸಿಕ್ಕುವುದೇ?
ಕೋಗಿಲೆಯ ಕೊರಳ ಕೊಯ್ದರೆ
ಪಂಚಮದಿಂಪು ಕೈ ಸಾರುವುದೇ?
ಕಣ್ಣ ಕಿತ್ತು ಹುಡುಕಿದರೆ ಬೆಳಕಿನ ಕಾಂತಿ
ಕಾಣುವುದೇ? ನಿಮ್ಮ ಮರುಳುತನ
ನನ್ನನ್ನೀ ಭಂಗಕ್ಕೆ ಗುರಿಮಾಡಿತು!

ಮದ—ಅಲ್ಲಮನೆಲ್ಲಿ ಹೋದನು?

ಮಾಯೆ—ಅಲ್ಲಮನನರಿಯದೆ ತಳಮಳಿಸಿದೆನು
ಮಿಂಚಿನ ಮಿಡುಕಿನಂತೆ ಕಣ್ಣಿಗೆ
ತೋರುವನಲ್ಲದೆ ಕೈಗೆ ಸಿಕ್ಕುವುದಿಲ್ಲ.
ಅಂಬರದಂತೆ ಸೋಂಕುವನಲ್ಲದೆ
ಅನುಗತಿಗೆ ನಿಲುಕುವುದಿಲ್ಲ.
ಅಕ್ಷರದಂತೆ ಬಾಯಲ್ಲಿ ನಲಿವನಲ್ಲದೆ
ಚುಂಬನಕ್ಕೆ ದೊರಕುವನಲ್ಲ.
ಹೆಪ್ಪುಗಟ್ಟಿದ ಕತ್ತಲಲ್ಲಿ ಬೆಳಗಿನ
ಬಳ್ಳಿಯನರಸಿದಂತಾಯಿತು ಎನ್ನ ಗತಿ!
ಅಮಾಯೆ ನಾನು ಮಾಯಕಾರಂಗೆಳಸಿ
ಸುಖದ ಕನಸುಗಳ ಕಾಣುತ್ತ ಕಂಗೆಟ್ಟೆನಮ್ಮ!

ಮದ—ಏಳಿರಿ ದೇವಿ, ಮಜ್ಜನ ಗೈದು
ತಲ್ಪದಲ್ಲಿ ವಿಶ್ರಮಿಸಿಕೊಳ್ಳಿ.
ನಿಮ್ಮ ಆಯಾಸ ಪರಿಹಾರವಾಗುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ಆಲಸಿಕೆಯ ಸುದ್ದಿ ಆಗಲೇ ರಾಣಿಗೆ
ತಲುಪಿದೆ. ಅವರು ಬಂದು ಬಿಡುವರು.

(ಪರಿವಾರದೊಡನೆ ಮೋಹಿನೀದೇವಿ ಬರುವಳು)

ಮೋಹಿನಿ—ಈಗ ಹೇಗಿರುವೆ, ಮಾಯಾ? ಏನಾಯಿತು? ವೈದ್ಯರನ್ನು ಕರೆಸಲೆ?

ಮಾಯೆ—ಬೇಡಮ್ಮ. ರಾತ್ರಿ ಕೆಟ್ಟ ಕನಸು ಬಿತ್ತು. ನಿದ್ರೆ ಬರಲಿಲ್ಲ. ಈಗ ಸುಖವಾಗಿದ್ದೇನೆ.

ಮೋಹಿನಿ—ವಿಶ್ರಮಿಸಿಕೋ ಮಗು. ನಿನ್ನ ನೃತ್ಯ ಗೀತೆಗಳಿಗೆ ಈ ದಿನ ವಿಶ್ರಾಂತಿ ಕೊಡು.....ಸಕಳೆ ನನ್ನೊಡನೆ ಬಾ.

(ಸಕಳೆಯನ್ನು ಪ್ರತ್ಯೇಕವಾಗಿ ಕರೆದುಕೊಂಡು ಹೋಗುವಳು. ಮದಮಾನ ಹೋಗುವಳು. ವಿಲಾಸಿನಿ ಮಾಯೆಯ ಶುಶ್ರೂಷೆ ಮಾಡುವಳು.)

ಮೋಹಿನಿ—ಏನದು ಮದ್ದಲಿಗನ ವಿಚಾರ? ಇರುಳೆನ್ನದೆ ಹಗಲೆನ್ನದೆ ಅವನನ್ನು ಕನ್ಯಾಂತಃಪುರಕ್ಕೆ ಬಿಡಬಹುದೇ ನೀವು?

ಸಕಳೆ—ಅರಸಿ ಬಯಸಿದರೆ ನಾವು ಮಾರುತ್ತರ ಕೊಡಬಲ್ಲೆವೇ ರಾಣಿ? ತಾನಾಗಿ ಕಾಮಿಸಿ ಸಮೀಪಕ್ಕೆ ಕರೆಸಿಕೊಂಡಳು.

ಮೋಹಿನಿ—ಕರೆಸಿಕೊಂಡರೆ ನೀನು ಹೇಗೆ ಸುಮ್ಮನಿದ್ದೆ? ಕನ್ನೆ ಮಾಡದ ಕಾವು ಕಟ್ಟಲೆ ನಿನಗೆ ತಿಳಿಯದೆ?

ಸಕಳೆ—ಮನುಜ ದೇಹ ಅಪೂರ್ವ. ಅದರಲ್ಲಿಯೂ ಜನಪತಿಯ ಮಗಳಾಗಿ ಹುಟ್ಟುವುದು ಇನ್ನೂ ಅಪೂರ್ವ. ಹುಟ್ಟಿದರೂ ಕಲಾವಿದೆಯಾಗಿ ಸಕಲ ಸುಖಗಳನ್ನು ತಿಳಿದು ಅನುಭವಿಸುವುದು ಮತ್ತಷ್ಟು ಅಪೂರ್ವ. ರಾಜ ಪುತ್ರಿ ತನ್ನ ಮನಬಂದಂತಿರಲಿ. ಅವಳಿಗೇಕೆ ಕಾಯಿದೆ ಕಟ್ಟಲೆಗಳು ಎಂದು ಸುಮ್ಮನಿದ್ದೆನು, ತಾಯಿ. ಅಪರಾಧವಾಗಿದ್ದರೆ ಕ್ಷಮಿಸಿರಿ.

ಮೋಹಿನಿ—(ಕ್ಷಣಕಾಲ ಚಿಂತಿಸಿ) ನಿಜ ಸಕಳೆ. ಕಾಯಿದೆ ಕಟ್ಟಲೆಗಳು ಕಲಾವಿದೆಯರಿಗಲ್ಲ. ತನುವಿರುವಾಗ ಸುಖವ ಬಯಸುವೆವು. ಬಂದಾಗ ಬಿಟ್ಟು ಬಳಿಕ ಭಾವಿಸಿದರೆ ಮತ್ತೆ ಬರುವವೇ? ನೀವೇನು ಮಾಯೆಗೆ ಅಹಿತರೇ? ಆದರೆ ಅರಸನರಿಯದಂತಿರಲಿ. ಆ ಮದ್ದಲಿಗನಿಗೆ ಮಧುಕೇಶ್ವರ ಮಂದಿರದ ಅತಿಥಿಶಾಲೆಯಲ್ಲಿ ಬಿಡಾರ ಮಾಡು. ಮಾಯೆ ಕರೆದಾಗ ಬಂದುಹೋಗಲಿ.

ಸಕಳೆ—ಆಜ್ಞೆ ರಾಣಿ.

CC-O. Vidyabharathi Book Centre, Sringeri

CC-O. In Public Domain. Digitized by eGangotri

(ಪುನಃ ಮಾಯೆಯ ಸಮೀಪಕ್ಕೆ ಬರುವಳು)

ಮೋಹಿನಿ—ಪುತ್ರಿ, ಉಚಿತವಲ್ಲದ ಕಾರ್ಯದಲ್ಲಿ ತೊಡಗಬೇಡ ನೀನು. ರಾಜಕುಲವನ್ನು ನಗೆಗೀಡುಮಾಡಬೇಡ. ನಿಮ್ಮ ತಂದೆಗೆ ತಿಳಿದರೆ ಏನು ಹೇಳುವರು? ಆಡಿಕೊಳ್ಳುವವರ ಮಾತಿಗೆ ಆಸ್ಪದ ಕೊಡುವುದೇ? ಕನ್ಯೆಯಾಗಿ ಪುರುಷ ಸಂಗಕ್ಕೆಳಸುವುದೇ?

ಮಾಯೆ—(ಲಜ್ಜೆಯಿಂದ ತಲೆಬಾಗಿ ಮೌನದಿಂದಿರುವಳು)

ಮೋಹಿನಿ—ಲಜ್ಜೆಯೇಕೆ? ನಡೆದದ್ದು ನಡೆದುಹೋಯಿತು. ಮುಂದೆ ಎಚ್ಚರವಾಗಿರು. (ಹೋಗುವಳು.)

ಮಾಯೆ—ನೋಡಿದೆಯ ಸಕಳೆ! ಆಗಲೆ ಚಾಡಿಕಾರರು ತಾಯಿಯ ಹತ್ತಿರ ದೊಡ್ಡದು ಮಾಡಿ ಏನೋ ಹೇಳಿದ್ದಾರೆ. ಹೇಳಲಿ, ಅಂಜಿಕೆಯೇನು? ಶಿಕ್ಷೆಗೆ ಗುರಿಪಡಿಸಲು ನಾನೇನು ಸಾಮಾನ್ಯರ ಪುತ್ರಿಯೇ?

ಸಕಳೆ—ರಾಣಿಗೆ ತಿಳಿದದ್ದರಿಂದ ಇಷ್ಟಕ್ಕೆ ಮುಗಿಯಿತು, ರಾಜಕುಮಾರಿ. ರಾಜನು ಕೇಳಿದ್ದರೆ ನಿನ್ನ ಅಪರಾಧಕ್ಕಾಗಿ ನಮ್ಮನ್ನು ಶಿಕ್ಷಿಸುತ್ತಿದ್ದನು.

(ಮದವಮಾನಿ ಅಲ್ಲಮನನ್ನು ಕರೆದುಕೊಂಡು ಪುನಃ ಪ್ರವೇಶಿಸುವಳು)

ಮದ—ರಾಣಿ ಹೊರಟು ಹೋದಳೇ? ಇಷ್ಟೆಲ್ಲ ಕೋಟಲೆಗೆ ಕಾರಣನಾದ ಧೂರ್ತನನ್ನು ಹಿಡಿದು ತಂದಿದ್ದೇನೆ.

ಅಲ್ಲಮ—ನನ್ನದೇನು ಅಪರಾಧ? ಕತ್ತಲೆಯನ್ನು ಬೆಳಕಿನೊಡನೆ ಒಂದುಗೂಡಿಸುವೆನೆಂಬ ನಿಮ್ಮ ಭಾವಭ್ರಮಿತ ಬುದ್ಧಿಯೇ ಈ ಎಲ್ಲ ಅನರ್ಥದ ಕಾರಣ.

ಸಕಳೆ—ಕನ್ಯಾಂತಃಪುರಕ್ಕೆ ನೀನು ಕಾಲಿಟ್ಟ ಮೊದಲು ನಮ್ಮೊಡತಿ ದುಃಖಕ್ಕೀಡಾದಳು. ಇನ್ನೂ ಏನೇನಾಗಬೇಕಿದೆಯೋ ನಿನ್ನಿಂದ!

ಮಾಯೆ—ಸುಮ್ಮನಿರು ಸಕಳೆ. ನಮ್ಮ ಪರಿಭವಕ್ಕೆ ಅನ್ಯರನ್ನೇಕೆ ದೂರುವೆ? ಬೇಡವೆಂದರೂ ಬಲಾತ್ಕಾರದಿಂದ ಅವರನ್ನಿಲ್ಲಿ ಕರೆತಂದವರು ನಾವು.

ಸಕಳೆ—ಆದದ್ದಾಯಿತು. ಈಗ ಮಹಾರಾಣಿಯ ಆಜ್ಞೆಯಂತೆ ಮಧುಕೇಶ್ವರ ಮಂದಿರದ ಅತಿಥಿ ಶಾಲೆಯಲ್ಲಿ ಅವರ ಬಿಡಾರಕ್ಕೇರ್ಪಡಿಸುವೆನು.

ಅಲ್ಲಮ—ಏನು ನೀವು ಹೇಳುತ್ತಿರುವುದು?

Sri Vidyabharathi Book Centre, Sringeri

CC-O. In Public Domain. Digitized by eGangotri

ಸಕಳೆ—(ಕೃತಕ ವ್ಯಂಗ್ಯದಿಂದ) ನಿಮ್ಮ ವಿಚಾರವನ್ನೇ ಧೂರ್ತ ಮಹಾಶಯರೇ. ಮಹಾರಾಣಿ ಆಜ್ಞಾಪಿಸಿದ್ದಾರೆ. ಇಂದಿನಿಂದ ನೀವು ಮಧುಕೇಶ್ವರ ಮಂದಿರದ ಅತಿಥಿಶಾಲೆಯಲ್ಲಿ ಬಿಡಾರ ಮಾಡಬೇಕು.

ಅಲ್ಲಮ—(ಕೃತಕ ವಿಷಾದದಿಂದ) ಏನು? ನಾನು ಮಾಯೆಯಿಂದ ಅಗಲಿರಬೇಕೇ?

ಸಕಳೆ—ಕರೆದಾಗ ಬಂದುಹೋಗಲು ಅನುಮತಿ ಕೊಡಲ್ಪಟ್ಟಿದೆ.

ಅಲ್ಲಮ—ಮಾಯೆಯನಗಲಿದ ಬಳಿಕ ಕಾಯವುಂಟೇ, ಮರುಳೇ? ಪ್ರಾಣವಾಗಿಹ ವಾಯು ಚಲಿಸುವುದೇ? ಕಾಲು ಕೈ ಕಣ್ಣುಗಳು ಮಿಡುಕುವುವೇ ಬಾಯನುಡಿ ವ್ಯವಹಾರ ವ್ಯಸನಗಳುಂಟೇ ಬಳಿಕ? ಸಾಯದಂತಿರೆ ಸತ್ತೆ ನಾನು!

ಸಕಳೆ—ಚಿಂತಿಸಬೇಡ ಅಲ್ಲಮ. ಋಣವಿದ್ದರೆ ಮುಂದೆ ನಿನಗೆ ಮಾಯೆಯ ಸಂಬಂಧ ತಾನಾಗಿ ಕೂಡುವುದು.

ಅಲ್ಲಮ—ನಿನ್ನ ಅಭಿಸಂಧಿ ನಿರರ್ಥಕ ಸಕಳೆ!

ಕಂಗಳ ಮುಂದಣ ಕನಸು
ಹಿಂಗದ ತುಂಬಿಯ ಪರಿಮಳ
ಅಂಗವಿಲ್ಲದ ರೂಪಿಗೆ ಸಂಗವುಂಟೇ?
ಗಗನದ ಹಣ್ಣನೆ ಕೊಯ್ದು
ಮುಗುದೆ ರುಚಿಯನರಿಯಳು.
ಹಗರಣದ ಅಹಮ್ಮಾವಿನ ಹಯನು ಸಯವಪ್ಪುದೇ?
ಮಾಯದ ಕೈಯಲ್ಲಿ ಓಲೆಕಂತವ ಕೊಟ್ಟರೆ
ಲಘುವಿನ ವಿಘುನವ ಬರೆಯಿತ್ತು ನೋಡಾ!
ಅರಗಿನ ಪುತ್ತಲಿಗೆ ಉರಿಯ ಸೀರೆಯನುಡಿಸಿದರೆ
ಅದು ಸಿರಿಯ ಸಿಂಗಾರವಾಯಿತ್ತು ನೋಡಾ!
ಅಂಬರದೊಳಗಾಡುವ ಗಿಳಿ
ಪಂಜರದೊಳಗಣ ಬೆಕ್ಕನುಂಗಿ
ರಂಭೆಯ ತೋಳಂದಗಲಿತ್ತು ನೋಡಾ ಗುಹೇಶ್ವರಾ!

Sri Vidyabharathi Book Centre, Sringeri

CC-O. In Public Domain. Digitized by eGangotri

ಆಲ್ಲನುನು ಹೋಗುತ್ತಿದ್ದಂತೆ ಸಖಿಯರು ಚಿಕ್ಕ ಸಚಿರಗಾಗಿ ಬಿರಿಗಣ್ಣು ಗಳಿಂದ ಅವನನ್ನೇ ನೋಡುತ್ತಿರುವರು. ಮಾಯೆ ನಿಟ್ಟುಸಿರಿಟ್ಟು ಕೈಗಳಿಂದ ಮುಖವನ್ನು ಮುಚ್ಚಿಕೊಳ್ಳುವಳು.

ಅಂಕ ೨

೧

ಕನ್ಯಾಂತಃಪುರ

ಕೆಲವು ದಿನಗಳ ಅನಂತರ

[ಮಾಯೆ ನಿಲುವು ಕನ್ನಡಿಯ ಮುಂದೆ ನಿಂತು ಅಲಂಕಾರ ಮಾಡಿಕೊಳ್ಳುತ್ತಿರುವಳು. ಸಕಳೆ ವಸ್ತ್ರಾಲಂಕಾರಗಳನ್ನು ಹಿಡಿದು ನಿಂತಿರುವಳು. ಮದಮಾನಿ ಮಾಯೆಯ ಕಾಲುಗಳಿಗೆ ಅಲಕ್ತಕ ಹಚ್ಚಿ ನೂಪುರ ತೊಡಿಸುವಳು.]

ಸಕಳೆ—ಎಷ್ಟು ದಿನಗಳ ಮೇಲೆ ನಮ್ಮ ಸಖಿ ಮಧುಕೇಶ್ವರ ಮಂದಿರಕ್ಕೆ ಹೋಗುತ್ತಿರುವುದು!

ಮದಮಾನಿ—ಈ ಅಂತರದಲ್ಲಿ ಎಂತಹ ಪ್ರಸಂಗಗಳು ನಡೆದುವು! ಅವುಗಳನ್ನು ನೆನೆಸಿಕೊಂಡರೆ....

ಸಕಳೆ—ಮಧುಕೇಶ್ವರನು ನಮ್ಮನ್ನು ರಕ್ಷಿಸಿದನು. ಇಲ್ಲವೇ ಮಹಾರಾಜರ ಕೋಪ ದುಃಖದಲ್ಲಿ ಪರ್ಯವಸಾನವಾಗುತ್ತಿತ್ತು.

ಮಾಯೆ—ಗಾಯದ ಮೇಲೆ ಸುಣ್ಣ ಹಚ್ಚುತ್ತಿರುವಿರಿ ನೀವು ಸಖಿಯರೆ, ಆ ಧೂರ್ತ ಅಲ್ಲಮನನ್ನು ಮರೆಯಲು ನಾನು ಪ್ರತಿನಿತ್ಯ ಪ್ರಯತ್ನಿಸುತ್ತಿದ್ದೇನೆ. ಅಂತರಂಗದ ಕೋಣೆ ಕೋಣೆಗಳಲ್ಲಿಯೂ ಹುಡುಕಿ ಅವನ ಕುರುಹುಗಳನ್ನು ಕಿತ್ತು ಹೊರಗೆಸೆಯಲು ಹವಣಿಸುತ್ತಿದ್ದೇನೆ. ಅದು ಸಾಧ್ಯವಾಗುತ್ತಿಲ್ಲ. ಹಗಲು, ರಾತ್ರಿ, ಜಾಗರದಲ್ಲಿ, ನಿದ್ರೆಯಲ್ಲಿ, ಕಾಮರೂಪಿಯಾಗಿ ಕಣ್ಣಿಗೆ ಕಾಣಿಸಿ, ಕೈಗೆ ನಿಲುಕದೆ ಕಾಡಿಸುತ್ತಿದ್ದಾನೆ ಅವನೆನ್ನನ್ನು!

ಸಕಳೆ—ಅಪೇಕ್ಷಿಸಿದಾಗ ಕರೆಸಿಕೊಳ್ಳಬಹುದಾಗಿತ್ತು ರಾಜಕುಮಾರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಯೆ—ಅಲ್ಲಮನಲ್ಲಿ ನನ್ನ ಪವಿತ್ರ ಪ್ರೇಮವನ್ನು ನೀನು ವೇಶ್ಯೆಯ ವ್ಯವಹಾರವನ್ನಾಗಿ ಮಾಡುತ್ತಿರುವೆ, ಸಕಳೆ. ಅಲ್ಲಮನು ಅಪೇಕ್ಷಿಸಿದಾಗ ತಾನಾಗಿ ಬರುವನು. ಹೇಳಿ ಕಳುಹಿಸಿ ಬರಮಾಡಿಕೊಳ್ಳುವ ಅಗತ್ಯವಿಲ್ಲ.

ಸಕಳೆ—ಆ ಧೂರ್ತನಿಗೆ ಅಷ್ಟೊಂದು ಸೌಜನ್ಯವಿದ್ದರಲ್ಲವೇ ?

ಮಾಯೆ—ನನ್ನ ಹೃದಯೇಶ್ವರನನ್ನು ನನ್ನ ಸಮ್ಮುಖದಲ್ಲಿ ನಿಂದಿಸ ಬೇಡ ಸಖಿ. ಪ್ರೇಮದಲ್ಲಿ ಎಲ್ಲವೂ ಸಾಧ್ಯ. ಆ ಸುದಿನವನ್ನೇ ನಾನು ನಿರೀಕ್ಷಿಸುತ್ತಿದ್ದೇನೆ.

(ದಾಸಿಯೊಬ್ಬಳು ಬರುವಳು)

ದಾಸಿ—ವಿಜಯಿಸು, ರಾಜಕುಮಾರಿ. ದಿವ್ಯಾಂಗ ತೇಜದ ಅಂಗನೆಯೊಬ್ಬಳು ಸಂವಿಧಾನಕ್ಕೆ ದರ್ಶನಕ್ಕಾಗಿ ಬಂದಿದ್ದಾಳೆ.

ಮಾಯೆ—ಸತ್ಕರಿಸಿ ಕರೆದುಕೊಂಡು ಬಾ.

(ದಾಸಿ ಹೊರಗೆ ಹೋಗಿ ವಿಮಲೆಯೊಡನೆ ಪುನಃ ಬರುವಳು)

ಮಾಯೆ—ಯಾರು ನೀನು ನಾರಿ ? ಎಲ್ಲಿಂದ ಬಂದಿರುವೆ ?

ವಿಮಲೆ—ಜಗದಂಬೆಯ ಆಜ್ಞೆಯಂತೆ ನಿಮ್ಮನ್ನು ನೋಡಲು ರಜತಾದ್ರಿಯಿಂದಿಳಿದು ಬಂದಿದ್ದೇನೆ ರಾಜಪುತ್ರಿ. ನನ್ನ ಹೆಸರು ದೇವಕುಮಾರಿ ವಿಮಲಾ.

ಮದ—(ನಗುತ್ತಾ) ಎಷ್ಟೊಂದು ದೊಡ್ಡ ಹೆಸರು ! ರಜತಾದ್ರಿಯಿಂದ ! ಜಗದಂಬೆಯ ಆಜ್ಞೆ ಪಡೆದು ! ನಾವೇನು ಮರುಳರೇ ಈ ಮಾತುಗಳನ್ನು ನಂಬಲು !

ವಿಮಲೆ—ಇಹದಲ್ಲಿ ಬಿದ್ದು ಪರವನ್ನೇ ಮರೆತ ಇವರೊಡನೆ ನನಗೆ ಸಂಬಂಧವಿಲ್ಲ ರಾಜಪುತ್ರಿ. ಅನುಮತಿಯಿತ್ತರೆ ಏಕಾಂತದಲ್ಲಿ ತಮಗೆ ಬಿನ್ನವಿಸಿಕೊಳ್ಳುತ್ತೇನೆ.

ಮಾಯೆ—ಮದಮಾನಿ, ಸಕಳೆ, ನೀವು ಸ್ವಲ್ಪ ಹೊತ್ತು ಹೊರಗಿರಿ. ಯಾರನ್ನೂ ಒಳಗೆ ಬಿಡಲಾಗದು.

ಮದ
ಸಕಳೆ }—ಆಜ್ಞೆ ದೇವಿ. (ಇಬ್ಬರೂ ಹೊರಗೆ ಹೋಗುವರು)

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಯೆ—ಸಖಿಯರ ಅವಿನಯವನ್ನು ಕ್ಷಮಿಸು, ದೇವಕುಮಾರಿ. ಏನು ನನ್ನೊಡನೆ ನಿನ್ನ ಕಾರ್ಯ?

ವಿಮಲೆ—ನೀನು ಕಾರಣ ಕನ್ಯೆ, ರಾಜಕುಮಾರಿ. ದೇವತೆಗಳಿಗೆ ಪ್ರಿಯವೂ, ಮಾನವರಿಗೆ ಶ್ರೇಯಸ್ಕರವೂ ಆದ ಮಹತ್ಕಾರ್ಯವೊಂದಕ್ಕಾಗಿ ನೀನು ಮಮಕಾರ ಭೂಪಾಲಕನ ಪುತ್ರಿಯಾಗಿ ಜನಿಸಿದೆ. ಜಗತ್ತಿನ ಜಂಜಡದಲ್ಲಿ ಸಿಲುಕಿ ನೀನಿದನ್ನು ಮರೆತಿರುವೆ. ಆ ವಿಸ್ಮೃತಿಯ ನಿದ್ರೆಯಿಂದ ನಿನ್ನನ್ನು ಎಚ್ಚರಗೊಳಿಸಿ ನಿನ್ನ ಕರ್ತವ್ಯವೇನೆಂಬುದನ್ನು ಸೂಚಿಸಲು ನಾನಿಲ್ಲಿ ಬಂದಿದ್ದೇನೆ.

ಮಾಯೆ—ನಾನು ಯಾರು? ಏನು ನನ್ನ ಜನ್ಮದ ಕಾರಣ?

ವಿಮಲೆ—ಅವಧರಿಸು, ರಾಜಪುತ್ರಿ. ನಾನದನ್ನು ತಿಳಿಸುತ್ತೇನೆ. ರಜತಾದ್ರಿಯಲ್ಲೊಂದು ದಿನ ಪರಶಿವನು ಜಗನ್ಮಾತೆಯಾದ ಪಾರ್ವತಿಯೊಡನೆ ಏಕಾಂತದಲ್ಲಿದ್ದಾಗ....

(ರಂಗದ ಒಂದು ಪಾರ್ಶ್ವದಲ್ಲಿ ಕೈಲಾಸ ಗೋಚರವಾಗುವುದು. ಶಿವ-ಪಾರ್ವತಿಯರು ಮಾತನಾಡುತ್ತಿರುವರು.)

ಪಾರ್ವತಿ—ನಾಥ ನಿನ್ನೋಲಗದೊಳೊಪ್ಪುವ ಮಹಾಮಹಿಮ
ರೆಲ್ಲರುಂ ಭವಕೆ ಬಾರದೆ ನಿತ್ಯ ಸುಖದೊಳಿರುವರೆ?
ಅಲ್ಲದಿರ್ದೊಡಮಿವರ್ಗೆ ಬೇರೊಂದು ನೆಲೆ
ಯಿಹುದೊ? ಪೇಳೆನಗೆ ಕರುಣಾಳು.

ಶಿವ—ಗಿರಿಜಾತೆ ನೀಂ
ನಿಜವು. ಬುದ್ಧಿಗೆ ತಕ್ಕ ಪ್ರಶ್ನೆಯಂ ಕೇಳುತಿಹೆ
ಹರಿವಿರಂಚಿಗಳಾದಿ ಯಾರಾದೊಡಂ ತುದಿಗೆ
ನಾಮರೂಪಗಳ ವಿರಚಿಸುವ ಸತ್ಕ್ರಿಯೆಯಿರಲು
ದೊರಕಲರಿಯದು ನಿತ್ಯಮುಕ್ತಿಪದ. ನಿಯಮವಿದು.

ಪಾರ್ವತಿ—ಆಂತಿರಲ್ ನಾಮರೂಪಕ್ರಿಯೆಗಳ ಗೆಲ್ದಿದು ನಿಲ
ಬಲ್ಲ ವಿಮಲೋದ್ಯೋಗ ಸಿದ್ಧಿ ಯಾವುದು ಪೇಳಿ?

ಶಿವ—ಭೋಗ ಭೂಮಿಯ ಭೋಗತನುವಿನಿಂದಾಗದ
ಅನುಪಮ ಸಿದ್ಧಿ, ಕರ್ಮಭೂಮಿಯ ಕರ್ಮತನುವಿನಿಂ
ದಾಗುವುದು ಚಿದ್ಘನದ ಯೋಗ ಯೋಗ್ಯರು ಯೋಚಿ

Sri Vidyabharathi Book Centre, Shringeri

CC-O. In Public Domain. Digitized by eGangotri

ಸುತ, ಭೂಮಿ ಭಾಗದಲಿ ಮಾನವ ಶರೀರದಿಂ
ಸಾಧಿಸುತೆ ನಿಜವನರಿವರು. ಸಿದ್ಧಿಪಡೆವರು.

ಪಾರ್ವತಿ—ಹಸಾದ. ಅಂತಿರ್ದೊಡಾಮನುಜ ಲೋಕದೊಳಾವ
ಪರಿಯೊಳಾಗುವುದು ಸಿದ್ಧಿವಿಧಾನ? ಅನುಭವದ
ವಿಧಿಗಳನು ಬೋಧಿಸುವ ಗುರುವಾರು?

ಶಿವ— ಅವಧರಿಸು.
ಪೇಳುವೆನು, ಗಿರಿಜೆ. ಆದಿಯಲಿ ಸುಜ್ಞಾನಿ ನಿರ
ಹಂಕಾರ ದಂಪತಿಗಳನುಪಮ ತಪೋನಿಷ್ಠೆ
ಯಿಂದೆನ್ನನರ್ಚಿಸಲು, ಎನ್ನಯ ನಿಜಸ್ವರೂ
ಪವನವರ ಸೂನುವೆಂಬಂದದಲಿ ಕಳುಹಿದೆನು,
ಧರಣಿಗಲ್ಲಮನೆಂಬ ನಾಮದಿಂ. ಪೋಗಿ ನೀ
ನಾ ಮಹಾತ್ಮನ ಕಂಡು ತತ್ವಮಂ ತಿಳಿಯುವುದು.

ಪಾರ್ವತಿ—ಬಲ್ಲೆ ನಾನಲ್ಲಮನ. ಸಾಮಾನ್ಯನವನು ಅಸ
ಮಾನ ತತ್ವಗಳನೆಂತರಿಯುವನು? ಅರಿಯದುದ
ನೆಂತು ಪರರಿಗೆ ಬೋಧಿಸುವನು?

ಶಿವ— ನಿಜವಾಡುವೆನು
ಮುನಿಯದಿರು, ಕಾಮಿನಿ. ಮಹಾತ್ಮನಲ್ಲಮನು.
ಬಲ್ಲಿದರವನ ಕರೆಯುವರು ಪ್ರಭುದೇವನೆಂದು.
ಕೈಮುಗಿಯುತ್ತ ಬೇಡುವರು ಜ್ಞಾನಪ್ರಸಾದಮಂ.
ಮಾತುಮಾತಿಗೆ ಸಿಗುವನಲ್ಲವನು. ಭಕ್ತಿಯಿಂ
ಭಜಿಸೆ ನಿಜರೂಪ ತೋರುವನು. ಅಲ್ಲದನ್ಯರಿಗೆ
ಅಗಮ್ಯನು.

ಪಾರ್ವತಿ— ಯತಾರ್ಥವಿದು ತಪ್ಪದಾದೊಡೆ ಪರೀ
ಕ್ಷಿಸಿ ನೋಡುವೆನು ನನ್ನ ಚಾರು ಚತುರತೆಗಳಿಗೆ
ಹೃದಯವನು ಸೂರೆಗೊಟ್ಟೋಡನೇ ಅಲ್ಲಮ
ಪ್ರಭುವೆಂದು ಪೊಗಳುವೆನೆಂದೆ.

CC-O. In Public Domain. Panini Kanya Maha Vidyalaya Collection. Digitized by eGangotri

CC-O. In Public Domain. Digitized by eGangotri

ಶಿವ— ರಾಣಿ ನೀಂ
ರಾಣಿಗೊಪ್ಪುವ ತೆರದೆ ನುಡಿಯುವೆ. ಪರೀಕ್ಷಿಸಲು
ಸೋಲು ತಪ್ಪದು ನಿನಗೆ

ಪಾರ್ವತಿ—(ಉತ್ತೇಜಿತೆಯಾಗಿ) ಅವಧರಿಸು. ಪೈಜೆಯಿದು.
ನನ್ನ ತಾಮಸ ಕಳೆಯೆ ಮೂರ್ತಿವೆತ್ತಿಹ ಮಾಯೆ
ಇವಳ ಕಳುಹುವೆನಿಳೆಗೆ. ಅಲ್ಲಮನನರಿಯುವೆನು.
ಇಲ್ಲವೇ ಹಿಡಿದೆಳೆದು ತಂದು ನಿಮ್ಮಡಿಗಳಲಿ
ನೂಂಕುವೆನು. ಪೈಜೆಯಿದು ಸಟೆಯಲ್ಲ.

(ಕೈಲಾಸ ಅದೃಶ್ಯವಾಗುವುದು)

ವಿಮಲೆ—ಈ ಪೈಜೆಯಂತೆ ಪಾರ್ವತಿಯ ತಾಮಸಕಳೆಯಾದ ನೀನು ಮನುಕಾರನ ಪುತ್ರಿಯಾಗಿ ಜನಿಸಿದೆ. ಅಲ್ಲಮನನ್ನು ಒಲಿಸಿ ಅವನಿಂದ ಪರ ತತ್ವದ ನಿಲುವನ್ನು ಅರಿಯುವುದು ನಿನ್ನ ಜನ್ಮದ ಕಾರಣ.

ಮಾಯೆ—ಹರಿಹರ ಬ್ರಹ್ಮಾದಿ ದೇವಾಸುರರೂ ಜನನಕ್ಕೆ ಬಂದಾಗ ಜಾತಿಸ್ಮರಣೆಯಿರುವುದಿಲ್ಲವೆಂದು ಕೇಳಿದ್ದೇನೆ. ಇನ್ನು ಸ್ತ್ರೀಯರಾದ ನಮ್ಮ ಪಾಡೇನು? ನಾನು ಪೂರ್ವಸ್ಥಿತಿಯನ್ನು ಮರೆತದ್ದು ಸಹಜ. ನೀನು ಸಕಾಲದಲ್ಲಿ ಬಂದು ಎಚ್ಚರಿಸಿದೆ. ನೀನು ಹೇಳಿದ ಅಲ್ಲಮ ಪ್ರಭುದೇವರು ಈಗ ಎಲ್ಲಿದ್ದಾರೆ?

ವಿಮಲೆ—ಎಳ್ಳಿನೊಳಗಣ ಎಣ್ಣೆಯಂತೆ, ಕಾಷ್ಟದೊಳಗಣ ಅಗ್ನಿಯಂತೆ, ಹಾಲೊಳಗಿನ ಬೆಣ್ಣೆಯಂತೆ ಎಲ್ಲೆಡೆಗಳಲ್ಲಿ, ಎಲ್ಲರೆಡೆಯಲ್ಲಿ ಇರುವ ಸಚ್ಚಿದಾನಂದ ಚೈತನ್ಯವೇ ಅಲ್ಲಮಪ್ರಭು.

ಮಾಯೆ—ನಮ್ಮ ಇಷ್ಟಾರ್ಥಗಳನ್ನು ಸಲ್ಲಿಸಲು ಸುಲಭದಲ್ಲಿ ಗೋಚರನೆನಿಸಿ ಕಾಣಿಸುವನೇ ಅಲ್ಲಮನು.

ವಿಮಲೆ—ಹರನನ್ನು ಭಕ್ತಿಯಿಂದ ಅರ್ಚಿಸಿದರೆ, ಅಲ್ಲಿಯೇ ಪ್ರಭುವೂ ಗೋಚರಿಸುವನು.

ಮಾಯೆ—ಮಧುಕೇಶ್ವರನನ್ನು ನಾನು ಪ್ರತಿನಿತ್ಯ ಭಕ್ತಿಯಿಂದ ಪೂಜಿಸುತ್ತಿದ್ದೇನೆ ವಿಮಲೆ. ಆದರೆ ಇದುವರೆಗೆ ನನ್ನ ಭಕ್ತಿ ನಿರರ್ಥಕ. ಪ್ರಭುವನ್ನು ನಾನು ಪಡೆಯಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಮಲೆ—ಶಿವ ಶಿವ! ಏನು ಹೇಳಿದೆ ಮಾಯಾದೇವಿ? ಗುರುವಿನುಪ ದೇಶವಿಲ್ಲವೋ ನಿನಗೆ? ಮಂತ್ರವಿಹೀನವೋ ನಿನ್ನ ಮತಿ. ಅಥವಾ ತಂತ್ರ ಕ್ರಿಯೆ ಕಲಾಪಗಳನರಿಯೆಯಾ ನೀನು? ಉಚ್ಚರಿಸಬಹುದೇ ಶಿವಭಕ್ತಿ ನಿರರ್ಥಕವೆಂದು? ಮರೆತು ಕಳೆ, ಈ ಮರುಳುತನವನ್ನು.

ಮಾಯೆ—ಅಷ್ಟೆಲ್ಲ ಕುಶಲತೆ ನನಗೆಲ್ಲಿ ಬರಬೇಕು? ನನಗೆ ತಿಳಿದಂತೆ ಅರ್ಚಿಸಿದೆ. ಪೂಜೆ ವಿಫಲವಾಯಿತು.

ವಿಮಲೆ—ಅದು ನಿನ್ನ ಕರ್ಮ, ರಾಜಕುಮಾರಿ.....ಇನ್ನೊಂದು ಮಾತು ಕೇಳುತ್ತೇನೆ. ಮುಚ್ಚಟೆ ಹೇಳು. ಹುಸಿದರೆ ಹರನಾಣೆ! ನಿನ್ನ ಕೋಮಲಾಂಗದಲ್ಲಿ ಕಾಮನ ಕೈಮಸಗಿ, ವೇದನಿಸಿ, ನೋಯಿಸುತ್ತಿದೆ ಎಂಬಂತೆ ಕುರುಹಿರಲೇನು ಕಾರಣ?

ಮಾಯೆ—ಆಣೆಗಂಜುವೆನು, ದೇವಕುಮಾರಿ. ಕಾಮನ ಬಾಣಕ್ಕೆ ಭೀತಳಾಗಿ, ಪ್ರಾಣಪರಿಯಂತ ದಶಾವಸ್ಥೆಯಲ್ಲಿ ನೊಂದು, ಉತ್ತಮ ವಾದ್ಯ ವಿದ್ಯಾಪ್ರವೀಣನಾದ ಅಲ್ಲಮನೆಂಬ ಚಲುವನನ್ನು ಕಂಡು ಕಾಮಿಸಿ ಕಂಗೆಟ್ಟು ಕರಗಿದೆನವ್ವಾ, ನಾನು.

ವಿಮಲೆ—ಯಾರು ಈ ಅಲ್ಲಮನು, ರಾಜಪುತ್ರಿ? ನಿನ್ನ ಯೌವ್ವನ ಜ್ವಾಲೆ ಪಲ್ಲವಿಸಿ ಕಾಮಿಸಿರಲು, ಪ್ರಭುವೇ ವಿಚಿತ್ರ ವೇಷದಿಂದ ನಿನಗೆ ಕಾಣಿಸಿರಬಹುದೇ?

ಮಾಯೆ—ನೀನು ಹೇಳುವ ಪ್ರತ್ಯಕ್ಷ ಪರಬ್ರಹ್ಮನಾದ ಅಲ್ಲಮ ಪ್ರಭು ಬೇರೆ, ಈ ಮದ್ವಲೆಯಲ್ಲಮನು ಬೇರೆ ಎಂದು ನಾನು ತಿಳಿದಿದ್ದೇನೆ.

ವಿಮಲೆ—ಹಾಗಲ್ಲ ಮಾಯಾದೇವಿ. ಸಕಲರಿಗೂ ಸಾಕಾರನಾದ ಅಲ್ಲಮಪ್ರಭು, ನಿರ್ಮಲ ಮತಿಗಳಿಗೆ ನಿರ್ಗುಣ ರೂಪಾಗಿ ತೋರುವನು. ವಿಷಯ ಭೋಗದ ವಿಕಲತೆಯನ್ನು ಬಿಟ್ಟು, ಸಾತ್ವಿಕ ಬುದ್ಧಿಯಿಂದ ನೋಡಿದರೆ ತಿಳಿಯುವೆ ನೀನು.

ಮಾಯೆ—ವಾದವೇಕೆ? ಈಗ ನೀನು ನನ್ನ ಸಂಗಡ ಮಧುಕೇಶ್ವರ ಮಂದಿರಕ್ಕೆ ಬಂದರೆ ಆ ಮದ್ವಲಿಗನನ್ನು ನಿನಗೆ ತೋರಿಸುತ್ತೇನೆ. ಅವನೇ ಅಲ್ಲಮ ಪ್ರಭುವಾಗಿದ್ದರೆ ಮುಂದೇನುಮಾಡಬೇಕೆಂಬುದನ್ನು ಆಮೇಲೆ ಯೋಚಿಸಬಹುದು.

CC-O. Vidyabharathi Book Centre, Sringeri

CC-O. In Public Domain. Digitized by eGangotri

ವಿಮಲೆ—ಆಗಬಹುದು.

(ಮಾಯೆ ಚಪ್ಪಾಳೆ ತಟ್ಟಿ ಸಖಿಯರನ್ನು ಕರೆಯುವಳು. ಮದಮಾನಿ ಮತ್ತು ಸಕಳೆ ಬರುವರು)

ಮಾಯೆ—ಮಧುಕೇಶ್ವರ ಮಂದಿರಕ್ಕೆ ಹೋಗಲು ಅಂದಣ ಸಿದ್ಧವಾಗಲಿ. ಈ ದೇವಕುಮಾರಿಯೂ ನನ್ನ ಸಂಗಡ ಬರುವಳು.

ಮದ—ಹಸಾದ.

೨

ಮಧುಕೇಶ್ವರ ಮಂದಿರ

[ನವರಂಗದಲ್ಲಿ ಮಾಯೆ ನರ್ತಿಸುತ್ತಿದ್ದಾಳೆ. ವಾದ್ಯಗೋಷ್ಠಿಯಲ್ಲಿ ಅಲ್ಲಮನು ಮೃದಂಗ ನುಡಿಸುತ್ತಿದ್ದಾನೆ. ರಂಗದ ಪಾರ್ಶ್ವದಲ್ಲಿ ಸಕಳೆ ಮತ್ತು ಮದಮಾನಿ ಮತ್ತೊಂದು ಪಾರ್ಶ್ವದಲ್ಲಿ ವಿಮಲೆ ನಿಂತಿದ್ದಾರೆ.]

ಮದಮಾನಿ—ಯಾರಿರಬಹುದು ಈ ವಿಮಲೆ ?

ಸಕಳೆ—ಯಾರೋ ರಾಜದೂತಿಯೆಂದು ನನ್ನ ಸಂದೇಹ. ನೋಡು ಅಲ್ಲಮನನ್ನು ಹೇಗೆ ನಿಟ್ಟಿಸುತ್ತಿದ್ದಾಳೆ.

ಮದ—ದೃಷ್ಟಿ ತಿರುಗಿತು....ಈಗ ನೋಡು ಸಕಳೆ, ನಮ್ಮೊಡತಿಯೂ ಅವಳೂ ಕಣ್ಣುಗಳಿಂದಲೇ ಮಾತಾಡುತ್ತಿದ್ದಾರೆ. ಇದರಲ್ಲೇನೋ ರಹಸ್ಯವಿದೆಯೆಂದು ನನ್ನ ಸಂದೇಹ.

(ವಿಮಲೆ ಮತ್ತು ಮಾಯೆಯರ ಮಧ್ಯೆ ದೃಷ್ಟಿ ವಿನಿಮಯ. ವಿಮಲೆ ಸಂಕೇತ ಮಾಡುವಳು)

ಸಕಳೆ—ರಹಸ್ಯವೇನು ಬಂತು ? ಕಾಣುವುದಿಲ್ಲವೇ ಇಬ್ಬರ ಕಣ್ಣುಗಳೂ ಅಲ್ಲಮನ ಮೇಲೆ. ವಿಮಲೆಯೇನೋ ಸಂಕೇತ ಮಾಡುತ್ತಿದ್ದಾಳೆ.

ಮದ—ಈ ರಹಸ್ಯ ನನಗೆ ತಿಳಿಯಿತು, ಸಖಿ.

ಸಕಳೆ—ಏನು ನಿನಗೆ ತಿಳಿದಿರುವುದು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮದ—ಅಲ್ಲಮನು ಸಾಮಾನ್ಯನಲ್ಲ. ವೇಷ ಮರೆಸಿ ಬಂದ ಯಾರೋ ರಾಜಪುತ್ರ. ವಿಮಲೆ ನಿಜವಾಗಿ ರಾಜದೂತಿ. ದೇಶದೇಶದಲ್ಲಿ ಅಲ್ಲಮನನ್ನು ಹುಡುಕುತ್ತ ಬನವಸೆಗೆ ಬಂದಿದ್ದಾಳೆ.

ಸಕಳೆ—ಈ ಕಣ್ಣುಗಳ ಚೆಲ್ಲಾಟದಲ್ಲಿ ರಾಜಕುಮಾರಿಯ ನರ್ತನ ತಾಳ ತಪ್ಪಿ ಹೊಲಬುಗೆಟ್ಟಿತು.

(ಅನ್ಯಚಿತ್ತೆಯಾದ ಮಾಯಾದೇವಿಯ ನರ್ತನ ತಾಳ ತಪ್ಪುವದು. ಅಲ್ಲಮನು ವಿರಕ್ತಿಯಿಂದ ಮೃದಂಗವನ್ನು ಬಿಸುಟು ಸಭೆಯಿಂದೇಳುವನು)

ಮದ—ಪ್ರಮಾದ! ಪ್ರಮಾದ! ಈ ಕಣ್ಣಕೋಟಲೆಯನ್ನು ಅರಿತು ಅಲ್ಲಮನು ಮದ್ದಲೆಯನ್ನು ಬಿಸುಟು ಸಭೆಯಿಂದೆದ್ದನು.

ವಿಮಲೆ—ರಾಜಪುತ್ರಿ, ಇವನೇ ನಿಜವಾದ ಅಲ್ಲಮಪ್ರಭು.

ಮಾಯೆ—ಹಾಗಾದರೆ ನಮ್ಮ ಸಂದೇಹ ದಿಟವಾಯಿತು. ಈಗೇನು ಮಾಡುವುದು ?

ವಿಮಲೆ—ಜನಜಂಗುಳಿಯಲ್ಲಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುತ್ತಿದ್ದಾನೆ. ರಾಜಭಟರಿಗೆ ಆಜ್ಞೆ ಮಾಡು, ಮಾಯಾದೇವಿ. ಸಂಕೋಲೆಗಳಿಂದ ಬಂಧಿಸಿ ಆ ವಂಚಕನನ್ನು ಅರಮನೆಗೆ ಕರೆದೊಯ್ಯಲಿ.

ಮಾಯೆ—ಇದೇನು ನಿನ್ನ ಹುಚ್ಚು ಸಲಹೆ ವಿಮಲೆ. ನಾನು ಹಾಗೆ ಮಾಡಿದರೆ "ರಾಜಕುಮಾರಿ ಕಾಮಾತುರದಿಂದ ಅಲ್ಲಮನೆಂಬ ಮದ್ದಲಿಗನಿಗೆ ಮನಸೋತು ಮರುಳಾದಳು" ಎಂದು ಜನರು ಹೇಳುವುದಿಲ್ಲವೇ ?

ಮದ—ಸಭೆಯಲ್ಲಿ ಅಲ್ಲಮನೆಲ್ಲಿಯೂ ಕಾಣುತ್ತಿಲ್ಲ ಮಾಯಾದೇವಿ. ನೆರೆದ ಜನರು ಬೆರಗಾಗಿ ನೋಡುತ್ತಿದ್ದಾರೆ.

ವಿಮಲೆ—ನಾನವನ ಜಾಡನ್ನು ತೋರಿಸನೆನು, ಸಂಗಡ ಬಾ ರಾಜಕುಮಾರಿ. ಕಾದೆನ್ನದೆ ಬೀಡೆನ್ನದೆ ಅಲ್ಲಮನ ಗತಿ ಹಿಡಿದು ನಡೆ. ಪಾರ್ವತಿಯ ಪೈಜೆ ಫಲಿಸುವುದು.

ಸಖಿಯರು—ಸಂಗಡ ನಾವೂ ಬರುವೆವು.

ಮಾಯೆ—(ವಿಷಾದದಿಂದ) ಆಯಿತೇ ಕಡೆಯಾಟ!
ಹೂಡಿತೆ ಲೆಯಿರಿತೆ ತಪಿಸಿದಾಗಿ!

Sri Vidyabharati Book Centre, Sringeri

CC-O. In Public Domain. Digitized by eGangotri

ಕಾಮನ ಬಾಯ ಬಾರಿಗೆ ಬಿದ್ದೆನೇ
ನಗುವರಿಗೆಡೆಯಾಗಿ! (ಹೋಗುವರು)

೩

[ಆರಣ್ಯ. ಅಲ್ಲಮನನ್ನು ಬೆನ್ನಟ್ಟಿ ವಿಮಲೆ ಮತ್ತು ಸಖಿಯರೊಡನೆ ಮಾಯೆ ಬರುತ್ತಾಳೆ]

ಮದ—ದೊರೆತನು! ದೊರೆತನು!
ಬಾ, ರಾಜಕುಮಾರಿ. ಇಲ್ಲಿಯೇ ಇದ್ದಾನೆ ಅಲ್ಲಮನು
(ಅಲ್ಲಮನನ್ನು ಅಡ್ಡಗಟ್ಟಿ)
ಧೂರ್ತ! ಕುಟಿಲ! ಕುತ್ಸಿತ!
ಏನು ಮಾಡಿದೆ ನಮ್ಮೊಡತಿಯನ್ನು!
ಇಷ್ಟು ದಿನ ಮನವೊಲಿದಂತಿದ್ದು
ಕಡೆಯಲ್ಲಿ ಘಾಸಿ ಮಾಡುವುದುಚಿತವೇ ನಿನಗೆ?

ಅಲ್ಲಮ—ಇದರಲ್ಲಿ ನನ್ನ ಅಪರಾಧವೇನಿದೆ?
ಯಾರು ಮೊದಲಲ್ಲಿ ಬಯಸ ಹೇಳಿದವರು?
ಯಾರು ಕಾಣುತ್ತ ಕರೆಸಿಕೊಂಡವರು?
ಯಾರು ಬಳಿಕ ಉಪೇಕ್ಷಿಸಿದವರು?
ನಾರೀ ಸಹಜವಾದ ಚಂಚಲತೆಯಿಂದ
ನಿಮ್ಮೊಡತಿ ತನಗೆ ತಾನೇ ಘಾಸಿಗೊಂಡರೆ
ನಾನದಕ್ಕೆ ಕಾರಣನೆ?

ಮದ—ಈ ಚಾತುರ್ಯ ಇನ್ನು ಸಾಕು, ವಂಚಕ!
ರಾಜಕುಮಾರಿಯೊಡನೆ ನಗರಕ್ಕೆ ಹಿಂದಿರುಗು.

ಮಾಯೆ—ಸರಳತೆ, ಔದಾರ್ಯ, ಸ್ನೇಹಗಳ ನಿಧಿಯೆಂದು
ನಿನ್ನನು ನಾನು ನಂಬಿದೆ, ಪ್ರಭು.
ಸಟೆ, ಕುತ್ಸಿತ, ಕುಮಂತ್ರದ ವಂಚಕನೆಂದು,
ತಿಳಿದಿರಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಮ—ಕುಟಿಲ, ಕುತ್ಸಿತ ಧೂರ್ತತೆಗಳು
ಮಾಯೆಯದೋ ? ಅಲ್ಲಮನದೊ ?
ದಿಟವ ಬಲ್ಲ ಮುನಿ ಸಿದ್ಧ ಸಾಧಕರ ಕೇಳು.

ಮಾಯೆ— ವರಮುನಿ ಸಿದ್ಧ ಸಾಧಕರೆನ್ನ ಅಧೀನರು.
ಅವರನಾನಾಡಿಸುವೆನಿಚ್ಛೆ ಬಂದಂತೆ.
ಸ್ವಾಧೀನೆ ನಾನು. ಅವರನ್ನೇನು ಕೇಳುವುದು !

ಅಲ್ಲಮ—(ನಕ್ಕು) ಅವರನ್ನು ನೀನು ಆಡಿಸುವುದಾದರೆ
ನಿನ್ನನ್ನು ಆಡಿಸುವವರಾರು ಮರುಳೇ ?
ಸಾಕು ಈ ಗರ್ವದ ನುಡಿ !
ಮಾಡಿದ ಕರ್ಮಫಲ ಕೈಗೂಡಿತು.
ಇನ್ನು ನನ್ನನ್ನು ಕಾಡದೆ, ಸವಿಯರ ಕೂಡಿ,
ನಗರಕ್ಕೆ ಹಿಂದಿರುಗು.

ಮಾಯೆ—ನಿನ್ನಿಂದ ನಿಮಗಾದ ಅಪರಾಧಗಳೇನು,
ನಾಥ ? ದೇವನೆಂದು ಪೂಜಿಸಿದರೆ
ಸಂಭಾವಿಸಿ ಮನೋರಥವ ತೀರಿಸದೆ
ಘಾವತಿಗೊಳಿಸುವುದು ಯಾವ ನ್ಯಾಯ ?

ಅಲ್ಲಮ—ಭಕ್ತಿಯ ವಿಭೇದ ಅಂತರಗಳನರಿಯದೆ
ಭಕ್ತಿಮಾಡಿದೆನೆಂದರೆ ನಂಬುವರೇ
ಬಲ್ಲವರು ? ಸಲ್ಲದ ಹೊನ್ನನಿತ್ತು
ಅಕ್ಕಸಾಲೆಯ ಬಯ್ಯಬಹುದೇ ಸಜ್ಜನರು ?

ಮಾಯೆ—ಸುಖವಿತ್ತು ಸೇವಿಸಿ, ನಿನ್ನಿಂದ ಶಿವ
ತತ್ವಾನುಭಾವದ ನಿಜವನರಿಯಲು
ನಾನು ಬಯಸಿದುದು ತಪ್ಪೇ ?

ಅಲ್ಲಮ—ಮನಸ್ಸಿನ ವಿಕಾರ ಜಂಜಡಗಳಿಗೆಡೆಯಿತ್ತು
ಇನ್ಮನದೆ ಬರಡು ಭಕ್ತಿಯ ಮಾಡಿ
ಫಲವೇಯೆಂದೆ ತೊಡರಿದರೆ ನಿಕ್ಕುವನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲವನು ? ಬರಿದೆ ಹಂಬಲಿಸಿ
ಹೊಲಬುಗೆಡಬೇಡ.

ಮಾಯೆ—ಒಲಿದು ವಂಚಿಸಿ ಬಂದುದಲ್ಲದೆ
ರಾಜಕುಮಾರಿಯೆನ್ನ ಲೋಕದ ಮುಂದೆ
ಭಂಗಪಡಿಸುವ ಈ ಅನ್ಯಾಯಿ
ಮದ್ದಲಿಗನ ನೋಡಾ !
ಸುಡಲೆನ್ನ ದೇಹ ! ಸುಡಲೆನ್ನ ಬಾಳು !

(ದುಃಖೋದ್ವೇಗದಿಂದ ಕೆಳಗೆ ಬೀಳುವಳು)

ವಿಮಲೆ—ನನ್ನ ಅರಿಕೆಯನ್ನು ಅವಧರಿಸು, ಪ್ರಭು !
ಶರಣಜನ ರಕ್ಷಾಮಣಿ ! ಕಿಂಕರ ಚಕೋರ
ಸುಧಾಕರ ! ಭಾಸುರ ದಯಾಂಭೋನಿಧಿ !
ನೀನು ಈ ಸ್ತ್ರೀಯಳ ತನುಮನವನರಿಸಿ
ಏನಾದರೂ ಹುರುಳಿದೆಯೇ ನೋಡು.
ನಿನ್ನ ಪ್ರೇಮವೇ ಅವಳ ಜೀವನ !
ಕರುಣೆಯೇ ಹರಣ !

ಅಲ್ಲಮ—ನೀರು ಹೆಪ್ಪುಗಟ್ಟಿದರೆ ಹಾಲೆಂದು
ಭುಂಜಿಸುವರೇ ? ಮತಿಗೆಟ್ಟವರಿಗೆ
ಎಷ್ಟು ಬುದ್ಧಿ ಹೇಳಿದರೇನು ಫಲ ?

ವಿಮಲೆ—ಕಬ್ಬಿಣ ಕೇಳೆಂದು ಕೋಪಿಸಿ, ಪರುಷ
ರೂಪದ ಪತಿ ಕಾಲಿಂದ ಒದ್ದರೂ ಒಂದೇ
ತೋಳಿಂದಪ್ಪಿದರೂ ಒಂದೇ. ಮಾಯೆ
ನಿನ್ನವಳು. ಅವಳನ್ನು ಪಾಲಿಸುವುದು ನಿನ್ನ ಕರ್ತವ್ಯ.

ಅಲ್ಲಮ—ಪರುಷಮಣಿಯ ಸ್ಪರ್ಶದಿಂದ ಕಬ್ಬಿಣ
ಚಿನ್ನವಾಗುವಂತೆ ಹಳೆಯ ಹಂಚು
ಹೊನ್ನಾಗದು, ವಿಮಲೆ. ಚಂಚಲ ಮನಸ್ಸಿನ
ಮಾಯಾಂಗನೆ ಏನು ಮಾಡಿದರೂ ಫಲಿಸುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಮಲೆ—ಅದೇನೇ ಇರಲಿ, ಮಾಯೆ ನಿನ್ನ ಪಾದಗಳನ್ನು
ಹಿಡಿದಿದ್ದಾಳೆ. ಅವಳನ್ನು ಕಾಯುವುದು,
ಕೊಲ್ಲುವುದು ನಿನ್ನಿಚ್ಛೆ.

ಅಲ್ಲಮ—ನಿನ್ನ ಹೆಸರಿಗೆ ತಕ್ಕಂತೆ ನುಡಿದೆ, ವಿಮಲೆ.
ಏಳು, ರಾಜಕುಮಾರಿ

(ಮಾಯೆಯನ್ನು ಕೈಹಿಡಿದೆಬ್ಬಿಸಿ)

ತಿಮಿರವೆಲ್ಲಿ? ಸೂರ್ಯನೆಲ್ಲಿ?
ಕಾಮವೆಲ್ಲಿ? ಪರತತ್ವದ ಸೀಮೆಯೆಲ್ಲಿ?
ತಾಮಸಕಳೆಯೆಸಿಸಿದ ನೀನೆಲ್ಲಿ? ಮಹಾಘನದ
ಶಿವಾನುಭವವೆಲ್ಲಿ? ಈ ನಿರರ್ಥಕ
ಆಸೆಯನ್ನು ತ್ಯಜಿಸಿ, ಬಂದಂತೆ ಹಿಂದಿರುಗು.

ಮಾಯೆ—ನನ್ನ ಕನಸು ಮನಸು ತನುಗಳಲ್ಲಿ
ಸುಳಿದು ಮೆಚ್ಚಿಸಿ ಈಗ ಕೋಪದಿಂದ
ನುಡಿದರೆ ಬಿಡುವೆನೇ ನಿನ್ನ!
ಸಾವು ಬಂದರೂ ಬಿಡುವಳಲ್ಲ.

(ಎಂದು ಆಲಂಗಿಸಲು ಹೋಗುವಳು)

ಅಲ್ಲಮ—ಕನಸಲ್ಲಿ ಚೇಳು ಕಚ್ಚಿದರೆ ನೋವಾಯ್ತೆಂದು
ಎದ್ದು ನರಳುವ ಮರುಳರುಂಟೇ?
ನಿನ್ನ ಮನೋವಿಕಾರಗಳು ನಿನ್ನ
ನೋಯಿಸುತಿರಲು ನನ್ನನ್ನೇಕೆ ದೂರುವೆ!
ಕಡಲ ನೀರೆಲ್ಲ ಅಮೃತವಾಗಬಹುದು.
ಸುರಗಿರಿ ಕುಡಿವಿಡಿದು ಹಬ್ಬಬಹುದು.
ಅವನಿಯ ಗಿಡಗಳೆಲ್ಲ ಕಲ್ಪತರುವಾಗಬಹುದು.
ಆಗಲೂ ಮಾಯೆಗೆ ಶಿವಾನುಭಾವದ
ತತ್ವಜ್ಞಾನವಿಲ್ಲ! ಬಯಲೆ ಬಿಡಿಸಲಂಟಿತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃತನಿಶ್ಚಯ ಮಾಡಿದರೆ, ಬಯಲು
ಕೈಸಾರುವುದೇ ? ನಡೆಯತ್ತ ಮರುಳೇ !

(ಆಲಿಂಗನಕ್ಕೆ ಸಿಕ್ಕದೆ ಅದೃಶ್ಯನಾಗುವನು)

ಮಾಯೆ—ಎಲ್ಲಿ ಅಲ್ಲಮನು ? ಎಲ್ಲಿ ನನ್ನ ಪ್ರಭು ?
ನಾಥ ! ನಾಥ ! ಎಲ್ಲಿ ನನ್ನ ಬಾಳಿನ ಬೆಳಕು !
ಮಾಯವಾದನು. ಮಾಯೆಯನಗಲಿ ಅಂತರ್ಧಾನ
ನಾದನು. ಮುರಿಯಿತು ಆಶಾಲತೆ !
ವ್ಯರ್ಥವಾಯಿತು ಬಾಳು !
ಇನ್ನು ಈ ಲೋಕದಲ್ಲಿ ಜೀವಿಸಿದ್ದು ನಾನೇನು
ಮಾಡುವುದು ? ಪ್ರಜ್ವಲಿತನಾಗು
ಆಧಾರ ಕಮಲವನ್ನು ಆಶ್ರಯಿಸಿದ ಅಗ್ನಿದೇವ !
ನಿನ್ನ ಶೀತಲ ಜ್ವಾಲೆಯಿಂದ ಈ ಮಾಯಾ ದೇಹ
ಭಸ್ಮವಾಗಲಿ !

(ಅಗ್ನಿಜ್ವಾಲೆ ಕಾಣಿಸಿಕೊಂಡು ಮಾಯೆ ಕಣ್ಮರೆಯಾಗುವಳು. ಸಖಿಯರು ಸ್ತಂಭೀಭೂತರಾಗಿ ನಿಂತಿದ್ದಂತೆ ಮಮಕಾರ, ಮೋಹಿನಿ ಮತ್ತು ಕುಲಗುರು ಅಹಂಕಾರ ಮುನಿ ಪ್ರವೇಶಿಸುವರು)

ಮಮಕಾರ—ಎಲ್ಲಿ ಮಾಯಾದೇವಿ ? ಪರದೇಶಿಯ ಸಂಗಕ್ಕೆಳಸಿ ಕುಲದ ಕೀರ್ತಿಗೆಡಿಸಿದೆ ಮಗಳೇ ! ನಮ್ಮನ್ನು ಜನರ ನಗೆಗೆಡೆಯಾಗಿ ಮಾಡಿದೆ !

ಮೋಹಿನಿ—ಬೇಡವೆಂದು ? ಎಷ್ಟು ಹೇಳಿದರೂ ಕೇಳದೆ ಕೊನೆಗೆ ಆ ಕೇಡಿಗನ ಸಂಗದಿಂದ ಕಾಡುಪಾಲಾದೆಯಾ ಪುತ್ರಿ !

ವಿಮಲೆ ಮಮಕಾರ ಭೂಪಾಲ, ಮೋಹಿನೀದೇವಿ. ನಾನು ಹೇಳುವು ದನ್ನು ಮನಮುಟ್ಟಿ ಕೇಳಿ. ನಿಮ್ಮ ಪುತ್ರಿ ಸಾಮಾನ್ಯ ಮಾನವಿಯಲ್ಲ. ಕಾರಣ ಕನ್ಯೆ. ಪಾರ್ವತಿಯ ಪೈಜೆಯಂತೆ ಅಲ್ಲಮನನ್ನು ಸಾಧಿಸಲು ಭೂಮಿ ಯಲ್ಲಿ ನಿಮ್ಮ ಮಗಳಾಗಿ ಹುಟ್ಟಿದಳು. ಸಾಧನೆ ವಿಫಲವಾಗಿ ಮರಳಿ ಪಾರ್ವತಿಯ ಸಾನ್ನಿಧ್ಯವನ್ನು ಸೇರಿದಳು. ಅವಳಿಗಾಗಿ ನೀವು ದುಃಖಿಸ ಬೇಡಿರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಹಂಕಾರ ಮುನಿ—ನಿಜ ರಾಜೇಂದ್ರ. ಏನು ಕಾರಣ ಬಂದಳೋ ? ಬಳಿಕೇನು ಕಾರಣ ಹೋದಳೋ ನಾವೇನು ಬಲ್ಲೆವು ?

ಮಮಕಾರ—ಈಗ ಕುಮಾರಿಯೆಲ್ಲಿ ?

ಮದ—ನೀವು ಬರುವ ಮೊದಲು ದೊಡ್ಡ ತೇಜಸ್ಸೊಂದು ಕಾಣಿಸಿತು. ಅದರ ಮಹಾಜ್ವಾಲೆಯನ್ನು ನೋಡಲಾರದೆ ನಾವು ಕಣ್ಣು ಮುಚ್ಚಿಕೊಂಡೆವು. ಪುನಃ ಕಣ್ತೆರೆದಾಗ ಮಾಯೆ ಅದೃಶ್ಯಳಾಗಿದ್ದಳು.

ಮೋಹಿನಿ—ಹಾ ! ಕುಮಾರಿ ! ಎಂತಹ ಹಾನಿ ತಟ್ಟಿತು ನಿನಗೆ !

(ಮೂರ್ಛೆ ಹೋಗುವಳು)

ಅಹಂಕಾರ ಮುನಿ—ದೇವಿಯನ್ನು ಸಂತೈಸಿ ನಗರಕ್ಕೆ ಹಿಂದಿರುಗು ರಾಜೇಂದ್ರ.

(ಹೋಗುವರು)

ಅಂಕ ೩

೧

ಕೈಲಾಸದಲ್ಲಿ

[ಶಿವಪಾರ್ವತಿಯರು ಸಿಂಹಾಸನಾರೂಢರಾಗಿರುವರು. ಪ್ರಮಥರು ಯಥೋಚಿತ ಸ್ಥಾನಗಳಲ್ಲಿ ಕುಳಿತಿರುವರು. ಮಾಯೆ ಪಾರ್ವತಿಯ ಕಾಲುಗಳನ್ನು ಹಿಡಿದು ಬೇಡುತ್ತಿರುವಳು. ವಿನುಲೆ ಸಮೀಪದಲ್ಲಿ ನಿಂತಿರುವಳು]

ಮಾಯೆ—ಕ್ಷಮಿಸು ಒಡತಿ. ನಿನ್ನ ಪೈಜೆಯನ್ನು
ಸಾಧಿಸಲು ನಾನು ಅಸಮರ್ಥಳಾದೆನು.
ಅಲ್ಲಮಪ್ರಭು ನನಗೆ ಸಿಕ್ಕದೆ ಅದೃಶ್ಯನಾದನು.

ಪಾರ್ವತಿ—ಪ್ರೇಮ ಕಾಮಗಳ ಸ್ವಾರ್ಥದಲ್ಲಿ ಸಿಲುಕಿ
ಕರ್ತವ್ಯವನ್ನು ಮರೆತ ಭ್ರಷ್ಟೆ ನೀನು.

ಶಿವ—ಕೋಪಿಸಬೇಡ, ಗಿರಿಜೆ. ನಿನ್ನ ಪೈಜೆ
ಇವಳನ್ನೀ ಭಂಗಕ್ಕೆ ಗುರಿಮಾಡಿತು
ಅದರಲ್ಲಿ ಇವಳ ಅಪರಾಧವೇನು ಇಲ್ಲ.

CC-O. Vidyaranya Sanskrit Research Centre, Sringeri

CC-O. In Public Domain. Digitized by eGangotri

ಪಾರ್ವತಿ—ಏಳು, ಮಾಯೆ. ನಿನ್ನ ಸರ್ವಾಪರಾಧಗಳನ್ನು
ಕ್ಷಮಿಸಿದ್ದೇನೆ. ಶೂಲಪಾಣಿ, ಮಹಾದೇವ,
ನಿನ್ನೊಡನೆ ಪಂಥ ಹೂಡುವುದು ನಿಷ್ಫಲ!
ನಿನ್ನ ನಿಜಸ್ವರೂಪವನ್ನು ತಿಳಿಯುವ
ವಿಧಾನವೇನು? ಕರುಣೆಯಿಂದ ನೀನೇ ತಿಳಿಸು.

ಶಿವ—ಹಾಗಾದರೆ ನಿರ್ಮಲವಾದ ನಿನ್ನ ಸಾತ್ವಿಕ
ಕಳೆಯನ್ನು ಭೂಲೋಕಕ್ಕೆ ಕಳುಹಿಸು.
ನಿಷ್ಕಾಮ ಭಕ್ತಿಯಿಂದ ಶಿವಾರ್ಚನೆ ಮಾಡುತ್ತ
ಸಿದ್ಧಿಲಾಭದ ಕಾಲವನ್ನು ನಿರೀಕ್ಷಿಸುತ್ತಿರಲಿ ಅವಳು.
ನಿಜರೂಪು ತೋರಿ ಅಲ್ಲಮಪ್ರಭು ಅನುಗ್ರಹಿಸುವನು.

ಪಾರ್ವತಿ—ಆಜ್ಞೆ, ದೇವದೇವ. ನನ್ನ ಸಾತ್ವಿಕ ಕಳೆ
ಮಹಾದೇವಿಯೆಂಬ ಹೆಸರಿಂದ ಭೂಮಿಯಲ್ಲಿ
ಜನಿಸುವಳು. ಫಲದಿಂದ ಫಲಿಸದಿದ್ದ
ನನ್ನ ಪೈಜೆ ನಯದಿಂದ ಫಲಿಸುವುದು.
ಬದುಕಿದೆ ನಿಮ್ಮ ಕರುಣೆಯಿಂದ ನಾನು

ವೃಷಭೇಂದ್ರ—ಶಿವಶಿವ! ಏನನಾಡಿದಿರಿ, ತಾಯಿ.
ಶಿವನ ಕರುಣೆಯಿಂದ ನೀವು ಅಚಲ ಸುಖಿಗಳು
ನಿಮಗೆ ಹಿಂದಾವ ಹಾನಿಯೂ ಆಗಿಲ್ಲ.
ಮುಂದೆ ಆಗುವುದೂ ಇಲ್ಲ. ಜಗನ್ಮಾತೆ
ಯೆನಿಸಿದ ನೀವು ಈ ರೀತಿ ಹೇಳಬಹುದೇ!

ಶಿವ—ವೃಷಭೇಂದ್ರ, ಮುಂದಾಗುವುದನ್ನು
ನಿನ್ನ ವಚನ ಸೂಚಿಸುತ್ತಿದೆ. ದೇವಿಯ
ಸಾತ್ವಿಕ ಕಳೆಯಂತೆ ನೀನೂ ಜಗದಲ್ಲಿ ಅವತರಿಸಿ
ಭಕ್ತಿಯ ಮಾರ್ಗವನ್ನು ಬೆಳಗಿ, ಪ್ರಭುದೇವರ
ಜ್ಞಾನಪ್ರಸಾದದಿಂದ ಸುಖಿಯಾಗು

ವೃಷಭೇಂದ್ರ—ಇದೇನು ನಿಮಾಜ್ಞೆ ಗೌರೀಪತಿ?

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿವ—ನೀನು ಅವತರಿಸಿ ದಾರಿ ತೋರದಿದ್ದರೆ
ಆತ್ಮರೂಪಿ ಅಲ್ಲಮನು ದೊರಕುವುದಿಲ್ಲ.
ನಿನ್ನ ಮಾರ್ಗದಲ್ಲಿ ನಡೆದು ಜನರು ಸ್ವಾನುಭವ
ಸುಖಸ್ವರೂಪದ ಆನಂದವನ್ನು ಸಾಧಿಸಲಿ.

ಒಬ್ಬ ಪ್ರಮಥ—ಈತನೇ ಭಕ್ತಿಯನ್ನು ಮೆರೆಸಿ
ಅಲ್ಲಮನನ್ನು ಸಾಧಿಸುವವನು ? ಭ್ರಾಂತಿ !
ಇನ್ನೊಬ್ಬ ಪ್ರಮಥ—ಅನುಭಾವವಿಲ್ಲದವರು ಭಕ್ತಿಯ
ಹಿರಿಮೆಯನ್ನು ಅರಿಯುವರೇ ? ವ್ಯರ್ಥ ವಿಡಂಬನೆ !

(ಸಭೆಯಲ್ಲಿ ನಗು)

ಶಿವ—ನಿಮ್ಮ ದೂಷಣೆಯ ನುಡಿ ಕೇಳಿ ಕೋಪಿಸಿದನೇ ?
ಮಾರುತ್ತರ ಕೊಟ್ಟನೇ, ವೃಷಭೇಂದ್ರ ?
ಇಷ್ಟೊಂದು ಶಮ ದಮ ಸಮತೆಯುಳ್ಳವರು
ಸಭೆಯಲ್ಲಿ ಮತ್ತಾರಿದ್ದಾರೆ ? ಧನ್ಯ, ಬಸವರಾಜ !
ಅರಿಯದೆ ವೃಷಭೇಂದ್ರನನ್ನು ದೂಷಿಸಿದ
ನೀವು ಕೂಡಾ ಜಗತ್ತಿನಲ್ಲಿ ಅವತರಿಸಿ
ಭಕ್ತಿಯ ಮಹಿಮಾತಿಶಯವನ್ನು ನೋಡಿ ಬನ್ನಿ.

(ಸಭೆಯಲ್ಲಿ ಗಲಿಬಿಲಿ. ಸ್ಥಾಪಕ ಅಥವಾ ಸೂತ್ರಧಾರನು ನೇಪಥ್ಯದಲ್ಲಿ ಮುಂದಿನ ಪದ್ಯವನ್ನು ಹಾಡುತ್ತಾನೆ)

ಸ್ಥಾಪಕ— ಅಲ್ಲಮ ಪ್ರಭು ಪಾದ ಪಂಕಜ
ದಲ್ಲಿ ಮಧುಕರನಾಗಿ ಮಂಡಿಸಿ
ಯೊಳ್ಳಿತೆನಿಪ ಶಿವಾನುಭಾವಾಮೃತದ ಬಂಡುಂಡು
ಬಲ್ಲಿತಹ ಬಗೆಯೆಂಬ ಹಸಿವಿನ
ಹೊಲ್ಲವೆಯ ನೆರೆನೀಗಬೇಕೆಂ
ದೆಲ್ಲ ಬಯಲು ಬಿಚ್ಚಿ ವೃಷಭ ಪ್ರಮಥರ ಮಹಿಮೆಯಂ ತೆರೆದಿಹೆನಿದೋ

CC-O. Jagadguru Taralabalu Jangama Vidyapeeth Collection. Digitized by eGangotri

CC-O. In Public Domain. Digitized by eGangotri

೨

ಸೊನ್ನಲಾಪುರದಲ್ಲಿ ಅರ್ಧ ಕಟ್ಟಿದ ಶಿವಾಲಯ

(ಕಲ್ಲುಗಟಿಗರು ಹಾಡುತ್ತಾ ಕಲ್ಲು ಹೊಡೆಯುತ್ತಿರುವರು)

—ಗೀತ—

ಮಹಿಮೆ ತೋರಿದ ನಮ್ಮ ಸಿದ್ಧರಾಮ !
ಭಕ್ತಿಮಾಡುವ ನಮ್ಮ ಸಿದ್ಧರಾಮ !
ಶಿವನ ಮಂದಿರಕೊಂದು
ಹಿರಿಯ ಗೋಪುರ ಕಟ್ಟಿ
ಅದಕಿಟ್ಟು ಚಿನ್ನದ ಕಳಶ,
ಬೆಳಗಿರೆ ಬಿಸಿಲಲ್ಲಿ ಸುರಗಿರಿಯಂದದೆ
ಮಹಿಮೆ ತೋರಿದ ನಮ್ಮ ಸಿದ್ಧರಾಮ
ಭಕ್ತಿ ಮಾಡುವ ನಮ್ಮ ಸಿದ್ಧರಾಮ
ಮನವೆಂಬ ಮಂದಿರ
ಅರಿವೆಂಬ ಗೋಪುರ
ಅದಕಿಟ್ಟು ಮುಕ್ತಿಯ ಕಳಶ,
ಒಳಗೆ ಬೆಳಗುವಾತ್ಮ ಶಿವಲಿಂಗವೆನಿಸಿರೆ
ಮಹಿಮೆ ತೋರಿದ ನಮ್ಮ ಸಿದ್ಧರಾಮ
ಭಕ್ತಿ ಮಾಡುವ ನಮ್ಮ ಸಿದ್ಧರಾಮ
ಮೌನದಂಜಲಿಯಲ್ಲಿ
ಧ್ಯಾನ ತೀರ್ಥವ ತಳೆದು
ಜ್ಞಾನ ಸೂರ್ಯನಿಗರ್ಪಿಸುವನು
ಭೇದಿಸಿ ಮಂಡಲ ಸಾಧಿಸಿ ಕುಂಡಲ
ಮಹಿಮೆ ತೋರಿದ ನಮ್ಮ ಸಿದ್ಧರಾಮ
ಭಕ್ತಿ ಮಾಡುವ ನಮ್ಮ ಸಿದ್ಧರಾಮ

(ಅಲ್ಲಮನು ಬರುವನು)

ಅಲ್ಲಮ—ಯಾರವರು ನಿಮ್ಮ ಸಿದ್ಧರಾಮ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲಸದವನು—ಸಿದ್ಧರಾಮಣ್ಣೋರು ತಿಳೀದಾ ಬುದ್ದಿ. ಮನೆ ಮಠ ಎಲ್ಲ ಬಿಟ್ಟು ಯೋಗಿಯಾಗಿ ಈ ಭಾರಿ ದೇವಸ್ಥಾನ ಕಟ್ಟಸ್ತಾ ಅವ್ರೆ.

ಅಲ್ಲಮ—ವಿಖ್ಯಾತಿ ಪೂಜಾ ಲಾಭಗಳ ಇಚ್ಛೆಯಿಂದ ಮನೆ ಮಠಗಳ ಚಿಕ್ಕ ಸಂಸಾರವನ್ನು ಬಿಟ್ಟು ಈ ಮಕ್ಕಳಾಟಕ್ಕೆ ತೊಡಗಿ ಸಿದ್ಧರಾಮನು ಒಡ್ಡರಾಮನಾದನೇ !

ಕೆಲಸದವನು—ಅದೇನಾ ಬುದ್ಧಿ ನೀವು ಹೇಳಿದ್ದು ?

ಅಲ್ಲಮ—ಏನೂ ಇಲ್ಲ ಅಣ್ಣ. ಈ ಗುಡಿಗೋಪುರಗಳ ಗೊಡವೆಯಿಂದ ಸಿದ್ಧರಾಮನು ಒಡ್ಡರಾಮನಾದನೆಂದು.

ಕೆಲಸದವನು—ನಮ್ಮ ದಣೇರನ್ನ ಬಯ್ತೀರಾ ಬುದ್ದಿ ನೀವು. ಒಡ್ಡರಾದರೇ ಅವರು ನಿಮ್ಮಣ್ಣ.

ಅಲ್ಲಮ—ಕಲ್ಲನ್ನು ಕಡಿದು ಕಲ್ಲಲ್ಲಿ ಕಲ್ಲಿಟ್ಟು ಗೋಪುರವ ಮಾಡಿಸುವುದರಲ್ಲಿ ಮುಕ್ತಿ ಕಾಣುವ ಸಿದ್ಧರಾಮನು ಒಡ್ಡರಾಮನಲ್ಲದೆ ಮತ್ತೇನು ?

ಕೆಲಸದವನು—ನಮ್ಮ ದಣೇರನ್ನ ಕಲ್ಲುಟಿಕ ಅಂತೀರಾ ! ಇವನ್ನ ಕಲ್ಲಿಂದ ಹೊಡೀರ್ಲಾ !

(ಎಂದು ಎಲ್ಲರೂ ಅಲ್ಲಮನನ್ನು ಕಲ್ಲಿಂದ ಹೊಡೆಯುವರು : ಕಲ್ಲುಗಳ ಮಳೆಯ ಮಧ್ಯೆ ಅಲ್ಲಮನು ಸಿಕ್ಕಲನಾಗಿ ಕಲ್ಲಿನ ರಾಶಿಯ ಮೇಲೆ ನಿಂತಿರುವನು.

ಅಲ್ಲಮ—ನೊಂದು ಸೈರಿಸದವ ಕನಿಷ್ಟನು
ನೊಂದು ಸೈರಿಸುವವನು ಮಧ್ಯಮ
ನೊಂದನೆಂಬುದು ನೆನಹಿಗಿಲ್ಲದೊಡಾತನುತ್ತಮನು.
ನೊಂದೆನಾದೊಡೆ ನಾನು ಮೂಜಗ
ಬಂದು ಹೋಗುವುದೆಂದು ತಿಳಿದಾ
ನಂದದಿಂ ನೋವೇನ ನರಿಯದೆ ನಗುವನಲ್ಲಮನು.

(ಸಿದ್ಧರಾಮನು ಬರುವನು)

ಸಿದ್ಧರಾಮ—ಹೋ ! ಹೋ ! ನಿಲ್ಲಿ. ಏನಿದ್ದು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲಸದವನು—ಇವ ಬಂದು ನಿಮ್ಮನ್ನು ಜರೀತಿದ್ದ ಧಣೇರ. ನಾವು ಕಲ್ಲೆಸೆದ್ರೆ ಕಲ್ಲಿನ ರಾಶೀಮೇಲೆ ನಿಂತವ್ನೆ.

ಸಿದ್ಧರಾಮು—ಇಂದ್ರಜಾಲ ಕಲಿತು ಬಂದು ನಮ್ಮ ಜನರನ್ನು ಕಾಡಿಸು ತ್ತಿರುವವನಾರಯ್ಯ ನೀನು? ಸಾಕು ಮಾಡು ನಿನ್ನ ಆಟವನ್ನು. ನಮ್ಮ ಮುಂದೆ ಅದು ನಡೆಯುವುದಿಲ್ಲ.

ಅಲ್ಲಮ—ನನ್ನ ಮೇಲೇಕೆ ಕೋಪ ಮಾಡುವೆ ಅಣ್ಣ ? ಏನು ನಡೆಯಿ ತೆಂಬುದನ್ನು ನಿಮ್ಮವರನ್ನೇ ಕೇಳು.

ಸಿದ್ಧರಾಮು—ಕೋಪವಂತೆ ಕೋಪ! ನಾನು ಯಾರೆಂದು ತಿಳಿದೆ ಪರದೇಶಿ! ನೀನು ಇಂದ್ರನೇ ಆಗಿರು, ಶಿವನೇ ಆಗಿರು, ನನ್ನನ್ನು ಜರಿದ ನಿನ್ನ ನಾಲಗೆಯನ್ನು ಬೇರು ಸಹಿತ ಕೀಳುತ್ತೀನೆ.

(ಎಂದು ವಿಜೃಂಭಿಸುವನು)

ಅಲ್ಲಮ—ಹಾಗಾದರೆ ನೀವೇಯೋ ಇವರು ಹೊಗಳಿ ಹಾಡುತ್ತಿದ್ದ ಗುರುಗಳು! ಯಾರೋ ಯೋಗಿವರ್ಯರಿರಬೇಕು ಎಂತ ಭಾವಿಸಿದೆ. ಕಾರಣವೇ ತಿಳಿಯದೆ ಇಷ್ಟೊಂದು ಕೋಪವೇಕಪ್ಪ ನಿಮಗೆ? ಅಥವಾ ಅದೇ ನಿಮ್ಮ ಸಂಪ್ರದಾಯವೋ? ನಿರ್ಲೇಪರಾದವರಿಗೆ ಉಚಿತವೇ ಅದು?

ಸಿದ್ಧರಾಮು—ಪುನಃ ನಮ್ಮನ್ನು ಕೆಣಕುತ್ತಿದ್ದಾನೆ. ಸಂಪ್ರದಾಯದ ಮಾತು ನಿನಗೇಕಯ್ಯ?

ಅಲ್ಲಮ—ಲೋಕದ ಅಣಕವಾಡಿನಲ್ಲೇ ಮುಗಿಯುತ್ತಿದೆ ನಿಮ್ಮ ಮಾತು. ಯೋಗಿಗಳಂತೆ ಯೋಗಿಗಳು!

ಸಿದ್ಧರಾಮು—ನೀನೇನು ಬಲ್ಲೆ ನಮ್ಮ ಯೋಗವನ್ನು! ನಾನು ಸಿಡಿದರೆ ಹಣೆಗಣ್ಣಿನ ಕಿಡಿಗೆದರಿ ಸುಡಬಲ್ಲೆ ನಿನ್ನನ್ನು.

ಅಲ್ಲಮ—ಭಾಪುರೇ! ಸಿದ್ಧರಾಮು! ಈ ಕಣ್ಣುಗಳ ಬೇಗೆಯಿಂದ ಹಿಂದೆ ಏನೇನನ್ನು ಕೊಂಡೆಯೋ! ಹಿಂಸಾಧರ್ಮ ಕರ್ಮಗಳಲ್ಲಿ ನೀನು ಯೋಗಿಯೇ ಇರಬಹುದು. ರಾಗದಿಂದ ಉರಿದೇಳುತ್ತಿರುವ ಭವರೋಗಿ ನಿನ್ನಲ್ಲಿ ಮಾತಾಡಲೂ ಸಲ್ಲದು. ನಾನು ಹೋಗುತ್ತೀನೆ.

(ಎಂದು ಹೊರಡುವನು)

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದ್ಧರಾಮು—(ಕೋಪದಿಂದ ಘುಡಿಘುಡಿಸಿ) ನಿಲ್ಲು, ಅಪ್ರಿಯವಾದಿ ? ಹಣೆಗಣ್ಣ ಕಿಡಿಗೆದರಿ ನಿನ್ನನ್ನು ಸುಟ್ಟುಬಿಡುತ್ತೇನೆ.

(ಎಂದು ಆಲ್ಲಮನನ್ನು ದುರುಗುಟ್ಟಿ ನೋಡುವನು. ಸಿದ್ಧರಾಮನ ಕಣ್ಣುಗಳಿಂದ ಕಿಡಿಗಳು ಹೊರಟು ಅಲ್ಲಮನ ಪಾದವನ್ನೂ ಸೋಂಕಲಾರದೆ ಸುತ್ತ ನಿಂತಿದ್ದ ಆವನ ಶಿಷ್ಯರ ಮೇಲೆ ಬೀಳುವದು.)

ಶಿಷ್ಯರು—ಗುರುಗಳೇ, ಬಡವನ ಕೋಪ, ದವಡೆಗೆ ಕೇಡು ಎಂದಂತಾಯಿತು ! ನಿಮ್ಮ ಕಿಡಿಗಣ್ಣುಗಳು ನಮ್ಮನ್ನೇ ಸುಡುತ್ತಿವೆ. ರಕ್ಷಿಸು ! ರಕ್ಷಿಸು.

ಅಲ್ಲಮು—ಕೋಪೋದ್ರೇಕದಿಂದ ತಾನೇ ಉರಿಯುತ್ತಿರುವ ಇವರು ನಿನ್ನನ್ನು ರಕ್ಷಿಸಬಲ್ಲರೇ ? ನಾನು ಈ ಉರಿಯನ್ನು ಉಪಸಂಹರಿಸಿ ಕೊಳ್ಳುವೆನು.

(ಆಲ್ಲಮನ ದೃಷ್ಟಿಯ ಅಮೃತವರ್ಷದಿಂದ ಉರಿ ಶಾಂತವಾಗುವುದು.)

ಸಿದ್ಧರಾಮು—ಯಾರಿರಬಹುದು ಈ ಮಹಾಮಹಿಮನು ? ಕೋಪವಿಲ್ಲದ, ಕಾಮವಿಲ್ಲದ ಶಾಂತ ಮೂರ್ತಿ ! ನನ್ನ ಇಷ್ಟ ದೈವವಾದ ಕಪಿಲ ಸಿದ್ಧಮಲ್ಲೇಶ್ವರನೇ ಈ ರೂಪದಿಂದ ಬಂದಿರಬಹುದೇ ? ಕುರಿಗಳಾದರೂ ಸಲಹಿದ ಒಡೆಯನನ್ನು ಬೆಂಬಿಡಿದು ಹೋಗುತ್ತವೆ. ಶಿವ ಶಿವಾ ! ಕುರಿಗಳಿಗಿಂತ ಕಡೆಯಾದೆವಲ್ಲಾ ನಾವು ! ನನ್ನನ್ನು ರಕ್ಷಿಸುವ ನನ್ನ ಸ್ವಾಮಿ ಬಂದಾಗ ಅರಿಯಲಾರದೆ ಹೋದೆನಲ್ಲಾ ನಾನು ! (ಎಂದು ಕ್ಷಣಕಾಲ ಚಿಂತಿಸಿ, ಬಳಿಕ) ತ್ರಾಹಿ, ತ್ರಾಹಿ, ಕರುಣಾಕರ ! ಸರ್ವ ದ್ರೋಹವೂ ನನ್ನದು. ನಿನ್ನನ್ನು ತಿಳಿಯದೆ ಮೋಹದ ಮಾಯೆಯಾಡಂಬರಕ್ಕೆ ಮರುಳಾದೆ ಇದುವರೆಗೆ. ಈ ಅಜ್ಞಾನಿಯ ಅವಗುಣಗಳನ್ನು ಮರೆತು ಕರುಣಿಸಬೇಕು.

(ಎಂದು ಆಲ್ಲಮನ ಕಾಲುಗಳ ಮೇಲೆ ಬೀಳುವನು)

ಅಲ್ಲಮು—(ಕೈಹಿಡಿದೆಬ್ಬಿಸಿ) ಈ ಮೂರ್ಖನ ಗುಣಗಳಿಗೇನು ಮಾಡುವುದು !.....ಏಳು ವತ್ಸಾ, ಸಾಕು ಈ ಮರುಕ. ನನಗೆ ನಿನ್ನ ಮೇಲೆ ಸ್ವಲ್ಪವೂ ಕೋಪವಿಲ್ಲ.

ಸಿದ್ಧರಾಮು—ದೇವ, ನೀನು ಈ ರೀತಿ ಜಂಗಮ ಭಾವಭಣಿತೆಗಳನ್ನು ಧರಿಸಿ ಬಂದರೆ ಗಾವಿಲರಾದ ನಾವು ಹೇಗೆ ತಿಳಿಯಬಲ್ಲೆವು ? ಯಾರೋ ಇಂದ್ರ

Sri Vidyabharathi Book Centre, Shringeri

CC-O. In Public Domain. Digitized by eGangotri

ಜಾಲಿಗನೆಂದು ಭಾವಿಸಿ ಅನ್ಯಾಯವಾಗಿ ನಿಮ್ಮನ್ನು ನೋಯಿಸಿದೆವು. ಕ್ಷಮಿಸಬೇಕು, ಪ್ರಭು.

ಅಲ್ಲಮ—ಸಿದ್ಧರಾಮ, ಚರಾಚರಗಳಿಗೆಲ್ಲಕ್ಕೂ ಒಳ್ಳಿಯದಾಗಲಿ ಎಂದು ಹರಸುವುದನ್ನು ಬಿಟ್ಟು ಕೆಲವರು ಪಕ್ಷಪಾತದಿಂದ ಗೋಬ್ರಾಹ್ಮಣರಿಗೆ ಮಾತ್ರ ಶಾಂತಿ ದೊರಕಲಿ ಎಂದು ಹರಸುವಂತೆ ನೀನು ಹಿರಿಯರನ್ನು ಸತ್ಕರಿಸಿ ಮಿಕ್ಕವರನ್ನು ಧಿಕ್ಕರಿಸುವೆ. ಯೋಗಿಶ್ವರನಿಗೆ ಉಚಿತವೇ ಈ ವರ್ತನೆ, ನೀನೇ ಯೋಚಿಸು.

ಸಿದ್ಧರಾಮ—ಉತ್ತಮ, ಅಧಮ ಎಂಬ ಪಕ್ಷಪಾತ-ಭ್ರಮೆ ಇನ್ನೂ ನನ್ನ ಮನಸ್ಸನ್ನು ಹಿಡಿದಿದೆ. ಸರ್ವರನ್ನೂ ಸಮಚಿತ್ತದಿಂದ ಕಾಣುತ್ತ ತಿಳಿಯುವ ವಿಶಾಲ ಭಾವನೆಯನ್ನು ನೀವೆನಗೆ ಕರುಣಿಸಬೇಕು ಗುರುದೇವ.

ಅಲ್ಲಮ—ಆಗಬಹುದು ಸಿದ್ಧರಾಮ. ಆದರೆ ಸಮಚಿತ್ತ ಒಂದೇ ಸಾರಿಗೆ ಬರುವುದಿಲ್ಲ. ಮೆಲ್ಲಮೆಲ್ಲನೆ ಬೆಳೆಸಬೇಕಾಗಿದೆ ಅದನ್ನು. ಯೋಗ ಮಾರ್ಗದಲ್ಲಿ ನಡೆದು ಚಿತ್ತಶುದ್ಧಿ ಮಾಡಿಕೊಳ್ಳುತ್ತ ಸರ್ವ ವಿಷಯಗಳಲ್ಲಿ, ಸರ್ವ ವಸ್ತುಗಳಲ್ಲಿ ವೈರಾಗ್ಯವನ್ನು ತಳೆದಾಗ ಸಮತೆ ಸ್ವಾಧೀನವಾಗುತ್ತದೆ.

ಸಿದ್ಧರಾಮ—ನಿಮ್ಮ ದರ್ಶನ ಸ್ಪರ್ಶನವೇ ನನಗೆ ಸರ್ವ ಸಮಾಧಿ. ಆ ಮನು ಮುನಿ ತ್ರಿದಶರು ನನಗಿದಿರೇ ಇನ್ನು? ನಿಮ್ಮ ಕರುಣೆಯಿಂದ ಎಲ್ಲವನ್ನೂ ಸಾಧಿಸುವೆನು. ಈಗ ನೀವು ನನ್ನ ಮಠಕ್ಕೆ ದಯಮಾಡಿಸಿ ಮಲ್ಲಿಕಾರ್ಜುನನ ದರ್ಶನಮಾಡಿರಿ, ಪ್ರಭು.

ಅಲ್ಲಮ—ಇದೇನು ಸಿದ್ಧರಾಮಯ್ಯ, ಇನ್ನೂ ಮರುಳನಂತೆ ಮಾತಾಡುತ್ತಿರುವೆ. ಮನೆಯೇನು, ಮಠವೇನು? ಊರೇನು, ಅಡವಿಯೇನು? ಸರ್ವಗತನಾದ ಮಲ್ಲಿಕಾರ್ಜುನನಿಗೆ ಇದು ಅದು ಎಂಬ ಸ್ಥಳಗಳುಂಟೇ? ಆ ಮಲ್ಲಿಕಾರ್ಜುನನನ್ನು ಅರಿತ ಶರಣರ ಬೆಡಗೂ ಹಾಗೆಯೇ. ಅವರು ನುಡಿದದ್ದೇ ಶಿವತತ್ವ. ನಡೆದುದೇ ಶಿವಮಾರ್ಗ.

ಸಿದ್ಧರಾಮ—ನಿಮ್ಮ ಅಭಿಮತವೇ ನನ್ನ ಅಭಿಮತ ಗುರುದೇವ. ಹಲವು ಬಿನ್ನಹಕಂಜುವೆನು. ಕೋಟಲೆ ನನಗಿನ್ನು ಬೇಡ. ಕರ್ಮದ ಕಳವಳಕ್ಕೆ ಬೇಸತ್ತಿದ್ದೇನೆ. ನಿಮ್ಮ ಪಾದಗಳ ನೆಲೆಯ ಕಾಣದೆ, ಖಂಡ ಜ್ಞಾನದಲ್ಲಿ ಬಿದ್ದು ಹೊಲಬುಗೆಟ್ಟಿದ್ದೇನೆ. ನೀವೇ ನನ್ನನ್ನು ಸಲಹುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಮ— ಎಂಭತ್ತು ನಾಲ್ಕು ಲಕ್ಷ ಜೀವಿಗಳಲ್ಲಿ ಮಾನವನೇ ಸರ್ವ ಶ್ರೇಷ್ಠನು, ಎಲ್ಲ ಕರ್ಮಗಳ ಕರ್ತೃ, ಅಧಿಕಾರಿ. ಇದನ್ನು ತಿಳಿದು ಮೋಕ್ಷವನ್ನು ಸಾಧಿಸಲೆಳಸುವವನು ಕರ್ಮಗಳನ್ನು ಉಪೇಕ್ಷಿಸದೆ ಸರ್ವೇಂದ್ರಿಯಗಳನ್ನು ಶಿಕ್ಷಿಸುವುದನ್ನು ಮೊದಲು ಕಲಿಯಬೇಕು.

ಸಿದ್ಧರಾಮ—ಮೊಲವನ್ನು ಕಂಡ ನಾಯಿಗಳು ನಿಲ್ಲುವುದುಂಟೇ? ಅದರಂತೆ ಇಂದ್ರಿಯಗಳು ವಿಷಯದಿಚ್ಛೆಗೆ ಮುಂದೆ ಹೋಗುವವು, ಕೊಂದು ಕೂಗುವವು. ಪ್ರಬಲವಾದ ಇಂದ್ರಿಯಗಳನ್ನು ವಶಪಡಿಸಿಕೊಳ್ಳುವ ಮಾರ್ಗವಾವುದು, ಗುರುದೇವ?

ಅಲ್ಲಮ – ಇಂದ್ರಿಯಗಳಿಗೆ ಮನಸ್ಸೇ ನಾಯಕನು. ಶಬ್ದ ಸ್ಪರ್ಶ ರೂಪ ರಸ ಗಂಧಗಳಲ್ಲಿ ಮನಸ್ಸು ಹರಿಯದಂತೆ ನಿಗ್ರಹಿಸುವುದರಿಂದ ಇಂದ್ರಿಯಗಳು ತಾವಾಗಿ ವಶವಾಗುವುವು.

ಸಿದ್ಧರಾಮ—ನಾನು ಆ ಮಾರ್ಗವನ್ನೇ ಅನುಸರಿಸುತ್ತಿದ್ದೇನೆ, ಗುರುದೇವ. ಹೊನ್ನು ಹೆಣ್ಣು ಮಣ್ಣುಗಳ ಮೇಲೆ ಮನಸ್ಸಿಡದೆ ಸವ್ವರ್ತನೆಯಲ್ಲಿದ್ದು ಕೊಂಡು, ಜನರಿಗೆ ಬೇಡಿದುದನ್ನು ಕೊಟ್ಟು ಪುಣ್ಯ ಸಂಪಾದನೆ ಮಾಡಿದರೆ ಅದರಿಂದ ಮೋಕ್ಷವಾಗುವುದಿಲ್ಲವೆ?

ಅಲ್ಲಮ – ನನಗೆ ಕೀರ್ತಿ ಬೇಕು, ಜನರು ನನ್ನನ್ನು ಹೊಗಳಬೇಕು, ನನಗೆ ಲಾಭವಾಗಬೇಕು ಇವೇ ಮೊದಲಾದ ಆಸೆಗಳಿಂದ ದಾನಧರ್ಮಗಳನ್ನು ಮಾಡಿದರೆ ಬೇಸಾಯಗಾರನು ಬಿತ್ತಿದ ಬೆಳೆಯನ್ನು ಣ್ಣುವಂತೆ ಪುಣ್ಯಾರ್ಜನೆಯಿಂದ ಬಂದ ಭೋಗಗಳನ್ನು ಎಂದಿಗೂ ಅನಭವಿಸಬೇಕಾಗುವುದು. ಅದು ಮೋಕ್ಷವೆನಿಸೀತೇ ಸಿದ್ಧರಾಮಯ್ಯ? ನೀನು ಹೆಂಡತಿ ಮಕ್ಕಳಮೇಲಿನ ಆಸೆಯನ್ನು ತೊರೆದು ಯತಿಯಾದೆ. ಈಗ ಕೆರೆ ಭಾವಿ ದೇವಸ್ಥಾನಗಳನ್ನು ಕಟ್ಟಿಸುವುದರಲ್ಲಿ ಆಸಕ್ತನಾಗಿದ್ದೀಯೆ. ಆಸೆ ನಿನ್ನನ್ನು ಬಿಟ್ಟೀತೇ ಹೇಳು? ಆಶಾಪೀಡಿತವಾದ ಮನಸ್ಸು ಯಾವಾಗಲೂ ಅನ್ಯ ಕಾರ್ಯಗಳಲ್ಲಿ ಆಸಕ್ತವಾಗಿರುವಾಗ ಮೋಕ್ಷವನ್ನು ನೀನು ಹೇಗೆ ತಾನೆ ಸಾಧಿಸಬಲ್ಲೆ? ಆಸೆಯಿಂದ ಹಿಡಿದ ಮನಸ್ಸು ಹಾಳುಬಿದ್ದಂತೆ. ಏಕಾಗ್ರತೆಗೆ ಅದರಲ್ಲಿ ಸ್ಥಾನವೇ ಇಲ್ಲ.

ಸಿದ್ಧರಾಮ—ಹಾಗಾದರೆ ಈ ಸಾವು ತಪ್ಪುವ ಉಪಾಯವೇನು? ಯಾವುದು ಮುಕ್ತಿ ಮಾರ್ಗದ ಹಾದಿ? ಮಾನವನು ನಿತ್ಯನಾಗುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಗೆ? ಬರಿಯ ವಾದದಿಂದೇನು ಫಲ? ನಿಮ್ಮ ಪಾದವೇ ಶರಣು. ಯಥಾರ್ಥವನ್ನು ನಮಗೆ ಬೋಧಿಸುವುದು.

ಅಲ್ಲಮ—ಹೊಲವನ್ನು ಹಸನು ಮಾಡಿ, ಹರಗಿ ಕಸವನ್ನು ಬಿತ್ತುವ ಮರುಳನಂತೆ ತತ್ವಾನ್ವೇಷಣದ ಅಂತರ್ಮಾರ್ಗಕ್ಕೆ ಒದಗುವ ತನು ಮನಗಳನ್ನು ಬಹಿರಂಗದ ಇಚ್ಛೆಯೆಂಬ ವ್ಯಸನದಲ್ಲಿ ಬೇಯಿಸದೆ ನಿನ್ನ ವಶಮಾಡಿಕೊಂಡಾಗ ನೀನು ಸುಖಿಯಾಗುವೆ. ಆನೆ ಕೆಸರಲ್ಲಿ ಬಿದ್ದಾಗ ತಾನೇ ತನ್ನ ಭುಜಬಲದಿಂದ ಮೇಲೇಳಬೇಕಲ್ಲದೆ ಬೇರೆಯವರು ಎತ್ತುವುದು ಸಾಧ್ಯವೆ? ನೀನೇ ತಪ್ಪಿದ ನಿನ್ನ ನಿಜವನ್ನು ನೀನೇ ಸಾಧಿಸಿಕೊಂಡೆಯಾದರೆ ಸದ್ಯೋಮುಕ್ತನಾಗುವೆ. ನಿನ್ನ ಚಿತ್ತೋಪಾಯವನ್ನು ಕಾರ್ಯದ ಕೋಟಿ ಕೇಡುಗಳಿಗೆ ಕೊಟ್ಟಿಯಾದರೆ ರಾಜಯೋಗ್ಯವಾದ ಪಾಯಸವನ್ನು ನಾಯಿಗಿಟ್ಟಂತಾಗುವುದು. ಈ ಕೋಟಲೆಗೆ ಸಿಕ್ಕದೆ ನೀನು ಚಿತ್ತವನ್ನು ಆತ್ಮಲಿಂಗದಲ್ಲಿಟ್ಟಾಗ ಮಾಯೆಯನ್ನು ಗೆಲ್ಲುವೆ, ಸಿದ್ಧರಾಮಯ್ಯ.

ಕಾಡು ಕುದುರೆಗೆ ಅತ್ಯಂತ ಶಿಕ್ಷೆಯಾಗಬೇಕಲ್ಲದೆ ಜಾತ್ಯಶ್ವಕ್ಕೆ ಚತುರನಾದ ರಾವುತನ ರಾಘವಾಪೆಗಳು ಸಾಲದೆ? ಸ್ವಯಂ ಸಂಸ್ಕಾರಿಯಾದ ನಿನಗೆ ಶಬ್ದಾಗಮಗಳ ಶಿಕ್ಷೆಯ ಅಗತ್ಯವೇನಿದೆ?

ದೇಹಭಾವವಳಿದಲ್ಲದೆ ಜೀವಭಾವ ಅಳಿಯದು.
ಜೀವಭಾವವಳಿದಲ್ಲದೆ ಭಕ್ತಿಭಾವ ಅಳವಡದು.
ಭಕ್ತಿಭಾವವಳವಟ್ಟಲ್ಲದೆ ಅರಿವು ತಲೆದೋರದು.
ಅರಿವು ತಲೆದೋರಿದಲ್ಲದೆ ಕುರುಹು ನಷ್ಟವಾಗದು.
ಕುರುಹು ನಷ್ಟವಾದಲ್ಲದೆ ಮಾಯೆ ಹಿಂಗದು.
ಅದು ಕಾರಣ ಕಾಯ ಜೀವದ ಹೊಲಿಗೆಯ ಅಳಿದ
ಭೇದವ ತಿಳಿಯ ಬಲ್ಲರೆ ನಮ್ಮ ಗುಹೇಶ್ವರ ಲಿಂಗದ
ಅರಿವು ಸಾಧ್ಯವಪ್ಪುದು ಕಾಣಾ, ಸಿದ್ಧರಾಮಯ್ಯ!

ಸಿದ್ಧರಾಮ—(ಕೈಜೋಡಿಸಿ) ಗುರುದೇವ, ನಿನ್ನ ಕರುಣೆಯಿಂದ ಭವತಿಮಿರ ಹರಿಯಿತು. ದಿವ್ಯ ಜ್ಞಾನ ದೀಪಾಂಕುರವನರಿತು ಪಾವನನಾದೆನು. (ವಂದಿಸುವನು)

Sri Vidyabharathi Book Centre, Sringeri

CC-O. In Public Domain. Digitized by eGangotri

೩

ಕಲ್ಯಾಣದಲ್ಲಿ ಬಸವಣ್ಣನವರ ಮನೆ

[ಹೆಬ್ಬಾಗಿಲಲ್ಲಿ ಕಾವಲುಗಾರರು, ಪಸಾಯಿತರು, ಪಡಪದವರು, ಪರಿಜನರು ಕಾದು ನಿಂತಿದ್ದಾರೆ]

(ಅಲ್ಲಮ, ಸಿದ್ಧರಾಮರು ಬರುವರು)

ಅಲ್ಲಮ—ಕಲ್ಯಾಣವೆಂಬ ಪ್ರಣತೆಯಲ್ಲಿ,
ಭಕ್ತಿರಸವೆಂಬ ತೈಲವನೆರೆದು,
ಆಚಾರವೆಂಬ ಬತ್ತಿಯಲ್ಲಿ
ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತಿರ್ದುದಯ್ಯ ಶಿವನ ಪ್ರಕಾಶ!
ಆ ಬೆಳಗಿನೊಳಗೊಪ್ಪುತಿರ್ದರಯ್ಯ
ಅಸಂಖ್ಯಾತ ಭಕ್ತ ಮಹಾಗಣಂಗಳು.
ಶಿವ ಭಕ್ತರಿಲ್ಲದ ಕ್ಷೇತ್ರ ಅವಿಮುಕ್ತ
ಕ್ಷೇತ್ರವೆಂಬುದು ಪುಸಿಯೇ?
ಶಿವ ಭಕ್ತರಿರ್ದ ದೇಶ
ಪಾವನವೆಂಬುದು ಹುಸಿಯೇ?
ಗುಹೇಶ್ವರ ಲಿಂಗದಲ್ಲಿ ಎನ್ನ
ಪರಮಾರಾಧ್ಯ ಸಂಗನ ಬಸವಣ್ಣನ ಕಂಡು
ಬದುಕಿದೆ ಕಾಣಾ! ಸಿದ್ಧರಾಮಯ್ಯ!

ಕಾವಲುಗಾರ—ಯಾರು ನೀವು? ಯಾರನ್ನು ನೋಡಬೇಕಾಗಿದೆ?

ಸಿದ್ಧರಾಮ—ನಮಗೇಕೆ ನೋಡಿ ಕಾಡುವ ಬಯಕೆ! ಬಂದೆವು ಹೋಗುತ್ತೇವೆ.

ಹಡಪದವನು—ಯಾರಿವರು! ಇಂದುಮೌಳಿಯ ಸಗುಣ ನಿರ್ಗುಣ ರೂಪರೋ!... .....ಮಹಾನುಭಾವರೆ, ಬಸವಣ್ಣನವರು ಪೂಜೆಯಲ್ಲಿದ್ದಾರೆ. ನೀವು ಮಹಾದ್ವಾರದ ಮಂಟಪದಲ್ಲಿ ಕ್ಷಣಕಾಲ ವಿಶ್ರಮಿಸಿಕೊಳ್ಳಿ. ನಾನು ಒಳಗೆ ಹೋಗಿ ಬರುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಮ—ಏಕಾಗಬಾರದು ? (ಹಡಪದಾತನು ಹೋಗುವನು)

(ಅಲ್ಲಮ ಸಿದ್ಧರಾಮರು ಮಂಟಪದಲ್ಲಿ ಕುಳಿತುಕೊಳ್ಳುವರು. ಮಹಾದ್ವಾರದ ಬಳಿಯಿದ್ದ ಜನರಲ್ಲಿ ಕೆಲವರು ಬಂದು ನಮಸ್ಕಾರ ಮಾಡುವರು.)

ಸಿದ್ಧರಾಮ—ನೀವು ಯಾರು ಅಣ್ಣಾ ! ಏತಕ್ಕಾಗಿ ಇಲ್ಲಿ ಕಾದಿದ್ದೀರಿ ?

೧ನೆಯವನು—ನಾನು ಕಾವಲುಗಾರ.

ಸಿದ್ಧರಾಮ—ನಿನ್ನ ಕೆಲಸ ?

೧ನೆಯವನು—ಕಾವಲುಗಾರನಿಗೆ ಕಾಯೋದಲ್ಲದೆ ಬೇರೆ ಏನು ಕೆಲ್ಸ ಐತ್ರಾ ಬುದ್ಧಿ !

ಸಿದ್ಧರಾಮ—ಕಾದು ಕಾದು ಬೇಸರವಾಗುವುದಿಲ್ಲವೆ ನಿನಗೆ ?

೧ನೆಯವನು—ಬೇಸರ ಅಂದರೆ ಹೊಟ್ಟೆ ತುಂಬುತ್ತಾ ಬುದ್ಧಿ ?

ಅಲ್ಲಮ—ಹೊಟ್ಟೆ ಇವನನ್ನು ಕಾಯಿಸುತ್ತದೆ. ಹೊಟ್ಟೆಯನ್ನು ಇವನು. ಕಾಯುತ್ತಾನೆ. ಈ ಕಾಯದ ಕಾವಲೇ ಮಾಯದ ಮೂಲ, ಸಿದ್ಧರಾಮಯ್ಯ

ಸಿದ್ಧರಾಮ—ನಿನ್ನ ಕೆಲಸವೇನಪ್ಪ ?

೨ನೆಯವನು—ನಾನು ಪಸಾಯಿತ ! ದಂಡನಾಯಕರ ಉಡುಗೆ ತೊಡಿಗೆಗಳ ಅಧಿಕಾರಿ.

ಸಿದ್ಧರಾಮ—ನಾವೂ ನಿನ್ನಂತೆ ಪಸಾಯಿತರೇ. ನೀನು ದೇಹವನ್ನ ಲಂಕರಿಸುವೆ. ನಾವು ಆತ್ಮದ ಉಡುಗೆ ತೊಡಿಗೆಗಳನ್ನು ಒದಗಿಸುವೆವು..... ಏನು ಹೇಳುವಿರಿ ಗುರುದೇವ ?

ಅಲ್ಲಮ—ನಿಜ, ಸಿದ್ಧರಾಮಯ್ಯ.

ಸಿದ್ಧರಾಮ—ಮತ್ತು ನೀನಾರು ?

೩ನೆಯವನು—ನಾನು ಹಡಪದವನು ಪ್ರಭು. ದಂಡನಾಯಕರಿಗೆ ತಾಂಬೂಲ ಪಾನೀಯಗಳನ್ನು ಕೊಡುವುದು ನನ್ನ ಸೇವೆ.

ಅಲ್ಲಮ—ನಿನ್ನ ಸೇವೆ ಸರ್ವೋತ್ತಮ. ನೀನು ಬಸವಣ್ಣನವರಿಗೆ ತಾಂಬೂಲ ಪಾನೀಯಗಳನ್ನು ಕೊಡುವೆ. ಅವರು ಜಗತ್ತಿಗೆ ಭಕ್ತಿಯ ವೀಳೆಯದೊಡನೆ ವಚನ ಸ್ವಾನದ ಮಧುವನ್ನೆರೆಯುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದ್ಧರಾಮ—ಇದು ಬಸವಣ್ಣನವರ ಮನೆಯೇ ಅಲ್ಲವೇ ಎಂದು ನನಗೆ ಸಂದೇಹವಾಗುತ್ತಿದೆ ಗುರುದೇವ. ನಾವು ದಾರಿತಪ್ಪಿ ಯಾರೋ ದಂಡನಾಯಕರ ಮನೆಗೆ ಬಂದಿದ್ದೇವೆ.

(ಹಡಪದ ಅಪ್ಪಣ್ಣ ಬರುವರು)

ಅಪ್ಪಣ್ಣ—ಶರಣು, ಶರಣಾರ್ತಿ. ನಿಮ್ಮನ್ನು ಕಂಡು ಮೃಡನ ದೃಶ್ಯಾದೃಶ್ಯ ರೂಪಗಳೆರಡನ್ನೂ ಕಂಡಂತೆ ಆನಂದವಾಯಿತು. ಒಳಗಡೆ ಬಿಜಯ ಮಾಡಿಸಿರಿ.

ಅಲ್ಲಮ—ಬಸವಣ್ಣನೆಲ್ಲಿ ?

ಅಪ್ಪಣ್ಣ—ಅವರು ಪೂಜೆಯಲ್ಲಿದ್ದಾರೆ. ಮುಗಿದೊಡನೆ ದರ್ಶನಕ್ಕೆ ಬರುವರು.

ಅಲ್ಲಮ—ನಡೆ ಸಿದ್ಧರಾಮಯ್ಯ. ನಮಗೇಕೆ ಅರಮನೆಯ ಗೊಡವೆ. ಸಭಾಮಂದಿರ ಪ್ರವೇಶ ? (ಎಂದು ಹೊರಡುವರು)

(ಅವರು ಮಂಟಪವನ್ನು ಬಿಟ್ಟು ಮಹಾದ್ವಾರವನ್ನು ಹಾದು ಹೋಗುತ್ತಿದ್ದಂತೆ ಬಸವಣ್ಣನವರು ಬಾಗಿಲಿಗೆ ಬಂದು ನಿಲ್ಲುವರು)

ಬಸವಣ್ಣ—ಎಂತಹ ಅಚಾತುರ್ಯ ! ಪೂಜೆಯಲ್ಲಿ ಮೈಮರೆತು ನಾನು ಗರ್ವದ ಗಿರಿಯೇರಿದಂತಾಯ್ತೆ ? ಮನೆಯ ಬಾಗಿಲಿಗೆ ಹುಡುಕಿ ಬಂದ ಮಹಾಘನ ಮಹಿಮರನ್ನು ನಾನೇ ಹೋಗಿ ಸ್ವಾಗತಿಸದೆ ಬೇರೆಯವರನ್ನು ಕಳುಹಬಹುದೇ ? (ಎಂದು ಅಲ್ಲಮನೆದುರು ಬಂದು ನಮ್ರನಾಗಿ ನಿಲ್ಲುವನು)

ಅಲ್ಲಮ—ನಮ್ಮ ಮಾರ್ಗವನ್ನು ತಡೆಯುವ ನೀನಾರು ರಾಜಪುರುಷ ?

ಬಸವಣ್ಣ—ಪ್ರಭುದೇವ,

ನಾನು ಮರೆವೆಯ ಮರುಳು,
ನೀನು ಅರಿವಿನ ತಿರುಳು,
ನಾನು ರಂಜಕನು, ನೀನು ನಿರಂಜಕನು
ನಾನು ಪಶು, ನೀನು ಪಶುಪತಿ
ನೀನಲ್ಲದೆ ಯಾರು ತಿದ್ದಬೇಕು ನನ್ನ ತಪ್ಪನ್ನು ?

(ಎಡಕ್ಕೆ ಕೈಯೊಡ್ಡಿ ಬಲಕ್ಕೆ ಬರುವನು)

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಮ—ನೋಡಿದೆಯಾ ಸಿದ್ಧರಾಮಯ್ಯ, ಭಕ್ತರು ಮಾಡುವುದು ತಾನೊಂದು, ಮಾತಾಡುವುದು ಬೇರೊಂದು. ಜಂಗಮ ಒಲಿದು ಬಂದಿರಲು ಮಾತಿನ ಚತುರತೆಯಿಂದ ಮಾಡಿದ ಅಪರಾಧವನ್ನು ನುಚ್ಚಿಕೊಳ್ಳುವ ರೀತಿ ಹೇಗಿದೆ?

ಸಿದ್ಧರಾಮ—ಭಕ್ತರ ಸಲಹಬೇಕೆಂದು ನೀನೇ ಸುಲಭವಾಗಿ ಸುಳಿಯುತ್ತಿರುವಾಗ ಅವರ ಗತಿಮತಿಯನೆಣಿಸುವುದುಚಿತವಲ್ಲ. ಕರುಣಿಸು ಗುರುದೇವ.

ಬಸವಣ್ಣ—ತಂದೆ ಸಿದ್ಧರಾಮಯ್ಯ, ದೇವತೆಯಂತೆ ಬಂದಿರಿ ನೀವು. ನನ್ನ ಅಪರಾಧಗಳೇನಿದ್ದರೂ ಮನ್ನಿಸಿ ಕಾಯುವುದು.

(ಅಷ್ಟರಲ್ಲಿ ಚನ್ನಬಸವಣ್ಣ, ಮಡಿವಾಳ ಮಾಚಯ್ಯ, ಕಿನ್ನರಿ ಬೊಮ್ಮಣ್ಣ ಮುಂತಾದವರು ಬಂದು ಅಲ್ಲಮನಿಗೆ ಎರಗುವರು.)

ಚನ್ನಬಸವಣ್ಣ—ಪ್ರೇಮದಿಂದ ರಕ್ಷಿಸುವ ತಂದೆತಾಯಿಗಳು ಮಕ್ಕಳಲ್ಲಿ ಗುಣದೋಷಗಳನ್ನು ಭಾವಿಸುವರೇ? ಬಸವಣ್ಣನಿಗೆ ತಂದೆ, ತಾಯಿ, ಸರ್ವವೂ ನೀನೇ. ರಕ್ಷಿಸು, ರಕ್ಷಿಸು ಗುರುದೇವ.

ಅಲ್ಲಮ—ನಡೆವಳಿ ಏನಾದರೂ ಆಗಲಿ, ನುಡಿವಳಿಯಲ್ಲಿ ಜಾಣರಾದಿರಿ ನೀವು. ನಡೆಯಿರಿ. ಶಿವಲಿಂಗ ಭಕ್ತಿಯನ್ನು ಏಕಾಂತದಲ್ಲಿ ಬೋಧಿಸುವೆನು. ನಿಮಗೆಲ್ಲ.

(ಎಂದು ಬಸವಣ್ಣನ ಕೈಹಿಡಿದು ಶಿವಶರಣರಿಂಪೊಡಗೂಡಿ ಮಹಾದ್ವಾರವನ್ನು ಪ್ರವೇಶಿಸುವನು.)

೪

ಅನುಭವ ಮಂಟಪ

[ಅಲ್ಲಮ ಪ್ರಭುವನ್ನು ಬಸವಣ್ಣ, ಚನ್ನಬಸವಣ್ಣ ಮತ್ತು ಶಿವಶರಣರು ಭಕ್ತಿಯಿಂದ ಕರೆತರುತ್ತಾರೆ]

ಬಸವಣ್ಣ—ನಿಮ್ಮ ಜ್ಞಾನಾಮೃತದ ಪ್ರತಿಭೆಯಿಂದ ನಾನು ಈ ಅನುಭವ ಮಂಟಪವನ್ನು ರಚಿಸಿದ್ದೇನೆ. ಪ್ರಭುದೇವ, ಈದಿನ ನೀವಿಲ್ಲಿ ಬಿಜಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿ ನನ್ನನ್ನು ಕೃತಾರ್ಥನನ್ನಾಗಿ ಮಾಡಿದಿರಿ. ನನ್ನ ಪರಿಶ್ರಮವನ್ನು ಸಫಲವಾಗಿಸಿದಿರಿ.

ಅಲ್ಲಮ—ಸಿದ್ಧರಾಮಯ್ಯನ ಹುಚ್ಚು ನಿನ್ನನ್ನೂ ಹಿಡಿದಂತಿದೆ ಬಸವಣ್ಣ! ಸರ್ವಸಂಗ ಪರಿತ್ಯಾಗಿ ಎನಿಸಿ ಒಬ್ಬನು ದೇಗುಲಗಳ ರಚಿಸಿದನು. ಸರ್ವಸಂಗ ಪರಿಗ್ರಾಹಿಯಾಗಿ ಮತ್ತೊಬ್ಬನು ಮಂಟಪಗಳನ್ನು ಕಟ್ಟಿಸಿದನು. ಅರಿಯಲಾರದೆ ಹೋದರೇ ಗುಹೇಶ್ವರಾ! ನಿನ್ನ ನಿವರಿಬ್ಬರೂ!

ಚನ್ನಬಸವ—ಅಣ್ಣನವರ ಅಭಿಮತವನ್ನು ನಾನು ವಿನ್ನವಿಸುತ್ತೇನೆ, ಪ್ರಭು. ಅನುಭವ ಮಂಟಪದ ವಾಸ್ತು ಶಿಲ್ಪ ಪ್ರಪಂಚದ ಸಾಮಾನ್ಯ ಸೌಧಗಳಂತಲ್ಲ. ನಿರ್ಗುಣ ನಿರಂಜನ ತತ್ವವನ್ನರಸಿದ ಭಕ್ತ, ಜಿಜ್ಞಾಸು, ತಾತ್ವಿಕ, ಜ್ಞಾನಿ, ಮಹಾತ್ಮ, ಮಹರ್ಷಿಗಳೆಲ್ಲರ ಅನುಭಾವದ ಮಥನಕ್ಕೆ ಮೀಸಲಾಗಿದೆ ಈ ಮಂದಿರ. ಇಲ್ಲಿಯ ಪ್ರತಿಕಂಬ, ಬೋದಿಗೆ, ಮೊಗಶಾಲೆ, ಶಿಲಾಸನಗಳೂ ಆ ಅಜ್ಞೇಯ ಪರತತ್ವದ ಅನ್ವೇಷಣದಲ್ಲಿ ನಮಗಾದ ಹೃದಯವೇದನೆ ಆವೇಗಗಳಿಗೆ ಸಾಕ್ಷಿಯಾಗಿವೆ. ಈ ಮಂಟಪದ ಒಂದೊಂದು ಕಲ್ಲೂ ಕ್ಷುದಿತ ಪಾಷಾಣದಂತೆ ನಿರಾಶಾಪೀಡಿತ ಮಾನವ ಹೃದಯದ ಕರುಣ'ಕತೆಯೊಂದನ್ನು ನಿವುಗೆ ಅರುಹಬಲ್ಲವು. ನಿರ್ದಯ ನಿಷ್ಠುರ ನೀತಿ ಬಾಹಿರ ಸಮಾಜದ ಘಾತ ಪ್ರತಿಘಾತಗಳಿಂದ ತೊಳಲಿ ಬಳಲಿದ ಅನೇಕ ಆತ್ಮಗಳು ಈ ಮಂಟಪದ ಆಶ್ರಯದಲ್ಲಿ ಶಾಂತಿಯ ನವಿಯನ್ನು ಕಂಡಿವೆ. ಕಲ್ಯಾಣದ ಯಶೋದುಂದುಭಿ, ವಚನ ಶಾಸ್ತ್ರದ ಗೌರೀಶಂಕರ, ಈ ಅನುಭವ ಮಂಟಪ!

ಸಿದ್ಧರಾಮ—ಬಸವಣ್ಣನ ಬಿನ್ನಹಕ್ಕೆ ಬಣ್ಣ ಹಚ್ಚಿ ಮೆರಗು ಕೊಟ್ಟಂತಿದೆ ನಿನ್ನ ಮಾತು ಚನ್ನಬಸವಣ್ಣ! ಮಂಟಪವನ್ನೊಂದು ಸಾರಿ ನಾವು ನೋಡಬಹುದೇ?

ಬಸವಣ್ಣ—ನಿಮ್ಮ ಮನೆಯನ್ನು ನೀವು ನೋಡಲು ಹೆರವರ ಅನುಮತಿ ಕೇಳಬೇಕೇ ಸಿದ್ಧರಾಮಯ್ಯನವರೇ?

ಚನ್ನಬಸವ—ತ್ಯಾಗದಲ್ಲಿ ಅಣ್ಣನವರನ್ನು ಮೀರಿಸಿದವರಿಲ್ಲ ಸಿದ್ಧರಾಮಯ್ಯನವರೇ.

CC-O. Jangamwadi Math Collection. Digitized by eGangotri

CC-O. In Public Domain. Digitized by eGangotri

ಅನಾಥಾಶ್ರಯ, ಸೇವಾಸದನಗಳ ದಿನಚರಿ ಸಂಭಾರಗಳಿಗೆ ಅವರು ತಮ್ಮ ಸರ್ವಸ್ವವನ್ನೂ ದಾನಮಾಡಿದ್ದಾರೆ.

ಸಿದ್ಧರಾಮು—(ಮುಂಟಪದಲ್ಲಿ ತಿರುಗಾಡಿ ನೋಡುತ್ತ) ರಜತಾದ್ರಿಯ ಮೇಲಿನ ಕೈಲಾಸದಂತೆ ಬೆಳ್ಳಿಯ ವೇದಿಕೆಯ ಮೇಲೆ ಕಾಣುವ ಆ ವಿಚಿತ್ರ ಪೀಠ ಎಷ್ಟೊಂದು ಸೊಗಸಾಗಿದೆ.

ಬಸವಣ್ಣ—ನೋಡುವವರ ಕಣ್ಮನಗಳನ್ನು ಸೆಳೆಯಲೆಂದೇ ಅದನ್ನು ರಚಿಸಿದೆ ಸಿದ್ಧರಾಮಯ್ಯನವರೇ. ಅದರ ಹೆಸರು ಶೂನ್ಯ ಸಿಂಹಾಸನ ಎಂದು.

ಸಿದ್ಧರಾಮು—(ನಕ್ಕು) ಶೂನ್ಯ ಸಿಂಹಾಸನ! ರಾಜಭಾಂಡಾರದಲ್ಲಿ ಬೆಳಗಲು ಅರ್ಹವಾದ ಅನರ್ಘ್ಯ ವಜ್ರ ವೈಢೂರ್ಯಗಳಿಂದ ರಚಿತವಾಗಿ, ಸ್ವರ್ಣಶಿಲ್ಪಿಯ ಶ್ರೇಷ್ಠ ಕಲಾಕೃತಿಯಂತಿರುವ ಈ ಸಿಂಹಾಸನವನ್ನು ಶೂನ್ಯವೆಂದು ಕರೆಯಬಹುದೇ ನೀವು! ಅಥವಾ ಯಾವಾಗಲೂ ಅದನ್ನು ಶೂನ್ಯವಾಗಿರಿಸುವುದು ನಿಮ್ಮ ಹೆಸರಿನ ಸಂಕೇತವೋ?

ಚನ್ನಬಸವ—ಶೂನ್ಯಸಿಂಹಾಸನದ ಸಂಕೇತವನ್ನು ತಿಳಿಯಬಯಸುವಿರಾದರೆ ನಿಮ್ಮ ಒಳಗಣ್ಣನ್ನು ತೆರೆಯಿರಿ ಸಿದ್ಧರಾಮಯ್ಯ, ಆಗ ಕಾಣುವಿರಿ ಅದ್ಭುತವೊಂದನ್ನು. ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ, ಆಜ್ಞಾ ಎಂದು ಕರೆಯಲ್ಪಡುವ ಚಕ್ರರೂಪವಾದ ಆರು ಕಮಲಗಳ ಮೇಲೆ ಬ್ರಹ್ಮಸ್ಥಾನವಾದ ಸಹಸ್ರಾರು ಕಮಲವನ್ನು ಆಶ್ರಯಿಸಿ ನಿಂತಿದೆ ಶೂನ್ಯ ಸಿಂಹಾಸನ ಪ್ರಣವವೇ ಬೇರು, ಸ್ವರಗಳೇ ಬುಡಗಳು, ಶಿವ ಪಂಚಾಕ್ಷರಿಯೇ ಶಾಖೆ, ಅಕ್ಷರಗಳೇ ಹೂವುಗಳು, ಪರತತ್ವವೇ ಫಲ—ಇಂತು ಬೆಳಗುವ ನಾದಮಹಾತರು, ಪೀಠದ ಹಿಂದೆ ಹೇಗೆ ಹರಡಿದೆ ನೋಡಿರಿ. ಲತೆಯಂತೆ ಆ ಮರವನ್ನು ಬಳಸಿರುವ ಶಿವತತ್ವವೆಂಬ ಮಹೋರಗನ ಹೆಡೆಗಳಲ್ಲಿ ಬೆಳಗುವ ಮಣಿಗಳ ಕಾಂತಿಯೇ ಪರಂಜ್ಯೋತಿ! ಪಂಚಭೂತದ ನೆಲೆಕಟ್ಟಿನಲ್ಲಿ ಹದಿನಾಲ್ಕು ಲೋಕಗಳನ್ನು ಅಳವಡಿಸಿ, ಮೇಲೆ ಆತ್ಮತತ್ವದಲ್ಲಿ ಐಕ್ಯಪದವಿಯನ್ನು ನಿಲ್ಲಿಸಿ, ಅಲ್ಲಿಂದ ಏಳನೆಯ ತುದಿಯಲ್ಲಿ ನಿರುಪಮ ನಿರ್ವಿಕಾರದ ಶೂನ್ಯ ಸಿಂಹಾಸನವನ್ನು ರಚಿಸಿದ್ದಾರೆ ಬಸವಣ್ಣನವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದ್ಧರಾಮ—ಧನ್ಯ ನೀನು ಬಸವಣ್ಣ! ನಿನ್ನ ರಚನೆಯ ಕೌಶಲ ನನ್ನನ್ನು ಮೂಕನನ್ನಾಗಿ ಮಾಡಿದೆ.

ಅಲ್ಲಮ—ಅನುಭವ ಮಂಟಪದ ಶರಣರೆಲ್ಲ ನಿನ್ನ ಮುಖವನ್ನೇ ನೋಡುತ್ತಿದ್ದಾರೆ ಸಿದ್ಧರಾಮಯ್ಯ. ಇಮ್ಮಾವಿನ ಎಳೆ ಚಿಗುರ ವಸಂತ ದೂತನನ್ನು ಕಂಡ ಮೇಲೂ ಕೋಗಿಲೆ ಕೂಗದೆ ಸುಮ್ಮನಿರುವುದು ಸಹಜವಲ್ಲ.

ಸಿದ್ಧರಾಮ—ಏನು ಹೇಳಲಿ ಪ್ರಭುದೇವ!
ನೀರ ಕ್ಷೀರದ ಸಂದುಗಳ ಹಂಸೆ ಬಿಚ್ಚಬಲ್ಲದು,
ದೇಹದ ಜೀವದ ಸಂದುಗಳ ನೀವು ಬಿಚ್ಚಬಲ್ಲಿರಿ,
ಅಲ್ಲದೆ ನಾನೆತ್ತ ಬಲ್ಲೆನಯ್ಯಾ!
ನೀವಿಕ್ಕದ ತೊಡಕ ಬಿಡಿಸಬಾರದು.
ನೀವು ಬಿಡಿಸಿದ ತೊಡಕನಿಕ್ಕಬಾರದು.
ಕಪಿಲ ಸಿದ್ಧಮಲ್ಲಿನಾಥಯ್ಯ! ನೀವೆನ್ನ
ಕಾಯದ ಜೀವದ ಹೊಲಿಗೆಯ ಬಿಡಿಸಾ, ನಿಮ್ಮ ಧರ್ಮ!

ಚನ್ನಬಸವ—ಸಿದ್ಧರಾಮಯ್ಯನವರು ನಿಜವನ್ನು ನುಡಿದರು. ಸಿಂಹಾಸನವನ್ನು ರಚಿಸಿ ಬಸವಣ್ಣನವರು ಯಾರು ಅದನ್ನೇರಬೇಕೆಂಬುದನ್ನು ನಿಶ್ಚೈಸಿಕೊಂಡಿದ್ದಾರೆ.

ಸಿದ್ಧರಾಮ—ಯಾರು ಅದನ್ನೇರುವವರು?

ಚನ್ನಬಸವ—ನಡೆವಲ್ಲಿ ಹಂಸವನ್ನು, ಸ್ವರವಲ್ಲಿ ಕೋಗಿಲೆಯನ್ನು, ಇನಿದಾದ ಮಾತುಗಳಲ್ಲಿ ರಾಜಕೀರವನ್ನು ಅನುಕರಿಸಿ, ಸಡಗರಿಸಿ, ಯಾರು ತೋರಬಲ್ಲರೋ ಅವರೇ ಈ ಶೂನ್ಯ ಸಿಂಹಾಸನವನ್ನೇರತಕ್ಕವರು, ಅವರೇ ಎನ್ನ ಹೃದಯಾಂಬುಜದ ರವಿ ಪ್ರಭುರಾಯರು ಎಂಬುದು ಬಸವಣ್ಣನವರ ದೃಢನಿಶ್ಚಯ.

ಸಿದ್ಧರಾಮ—ಹಂಸೆ, ಕೋಗಿಲೆ, ರಾಜಶುಕ—ಈ ಸಮ್ಮಿಳನ ಜೇನಿನೊಡನೆ ಹಾಲು ಬೆಣ್ಣೆಗಳನ್ನು ಬೆರೆಸಿದಂತಾಯಿತು ಬಸವಣ್ಣ! ನಿನ್ನ ಆತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಫಲಿಸಲು ಇನ್ನೊಂದು ಸಾರಿ ಸಮುದ್ರವನ್ನು ಕಡೆದು ಕಲ್ಪತರುವನ್ನು ಮೀರಿದ ಮಹಾ ವೃಕ್ಷವೊಂದನ್ನು ತರಬೇಕಾದೀತು.

ಬಸವಣ್ಣ—ಕಂಗಳ ಕತ್ತಲೆಯನ್ನು ಸೂರ್ಯನಲ್ಲದೆ ಮತ್ತಾರು ಕಳೆಯಬಲ್ಲರು? ಅಂಗಕ್ಕೆ ಸಹಜವಾದ ಅನಾದಿ ಮಾಯಾ ತಮಂಧವನ್ನು ಗುರುಗುಹೇಶ್ವರ ಲಿಂಗನಲ್ಲದೆ ಮತ್ತಾರು ಹಿಂಗಿಸಬಲ್ಲರು? ಬಸವನಲ್ಲಿ ದಯೆಯಿಂದ ಕಲ್ಯಾಣಕ್ಕೆ ಆಗಮಿಸಿ ಅಲ್ಲಮ ಪ್ರಭುದೇವರು ಅನುಭವ ಮಂಟಪದ ಶೂನ್ಯ ಸಿಂಹಾಸನವನ್ನು ನಿಶ್ಶೂನ್ಯವನ್ನಾಗಿ ಮಾಡಿದರು.

ಅಲ್ಲಮ—ಏನು ನೀನು ಹೇಳುವುದು ಬಸವಣ್ಣ? ನಮ್ಮ ಮೇಲಿನ ಅಭಿಮಾನ ನಿನ್ನನ್ನು ವಿಚಾರಶೂನ್ಯನನ್ನಾಗಿ ಮಾಡಿತೋ?

ಬಸವಣ್ಣ—ಪ್ರಭುದೇವ,

ಕುಂಡಲಿಯನಂಡಲೆದು ರವಿಶಶಿ
ಮಂಡಲಂಗಳ ಮೀರಿ, ಕಾಮದ
ಕಂಡಿಗಳ ಕೇಲಿಸಿ, ಸುಷುಮ್ನಾನಾಳದೊಳಗಡರಿ;
ಪ್ರಣವ ತರುವೆನೆ ನಿಮ್ಮಿ, ಮಂತ್ರಾ
ಗ್ರಣಿಯ ಪಂಚಬ್ರಹ್ಮ ಸರ್ಪನ
ಫಣಿಯ ಮಣಿಯಿಂದತ್ತಲದ್ವೈತ ಸ್ಥಲಾದಿಗಳ
ಕಣಿಯನೆಲ್ಲವ ಕಳೆದು, ನೆರೆ ನಿ
ರ್ಗುಣ ನಿರಾಳದ ನಿರುಪಮದ ಮೇ
ಲಣ ಮಹಾಸನವೇರೆ ಪ್ರಭು, ನೀನಿಲ್ಲದಿನ್ನಾರು?

ಶರಣರು—ಬಸವಣ್ಣನವರು ಸೂಕ್ತವನ್ನಾಡಿದರು. ಪ್ರಭುದೇವರು ಶೂನ್ಯ ಸಿಂಹಾಸನವನ್ನೇರಬೇಕೆಂಬುದು ನಮ್ಮೆಲ್ಲರ ಅಭಿಮತ

ಅಲ್ಲಮ—ಭಕ್ತಪರಾಧೀನನು ನೀನು, ನಿನಗೆ ಅಧೀನನು ನಾನು ಬಸವಣ್ಣ. ನಿಮ್ಮೆಲ್ಲರ ಇಚ್ಛೆಯನ್ನು ನಿರಾಕರಿಸಬಲ್ಲೆನೇ ನಾನು!

ತುಂಬಿ ಪರಿಮಳ ಉಂಡುದೋ!
ಪರಿಮಳ ತುಂಬಿಯನುಂಡುದೋ!
ಲಿಂಗ ಪ್ರಾಣವಾಯಿತೋ!

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಣ ಲಿಂಗವಾಯಿತೋ !
ಗುಹೇಶ್ವರಾ ! ಈ ಉಭಯ ಭೇದವ ನೀನೇ ಬಲ್ಲೆ !

(ಎಂದು ಬಸವಣ್ಣ ಚನ್ನಬಸವಣ್ಣರ ಕೈಹಿಡಿದು ಶೂನ್ಯ ಸಿಂಹಾಸನವನ್ನೇರುವನು. ಶರಣರು ಜಯಘೋಷ ಮಾಡುವರು.)

(ಮಹಾದೇವಿ ಅಕ್ಕನನ್ನು ಕರೆದುಕೊಂಡು ಮಧುರಯ್ಯನು ಬರುವನು)

ಮಧುರಯ್ಯ—ಪ್ರಮಥರೆಲ್ಲ ಅವಧರಿಸಿ ಭೋ !
ಕಾಮಿಯಾಗಿ ನಿಷ್ಕಾಮಿಯಾದಳು.
ಸೀಮೆಯಲ್ಲಿರ್ದು ನಿಸ್ಸೀಮೆಯಾದಳು.
ಭವಿಯ ಸಂಗವ ತೊರೆದು ಭವಬಾಧೆ ಹರಿದಳು
ಬಸವಣ್ಣ ಗತಿಯೆಂದು ಬರಲು
ನಾನು ಮಡಿಯ ಹಾಸಿ ನಡೆಸಿದೆ.
ನಡೆವುದಕ್ಕೆ ಹಾಸಿದ ಮಡಿಯ
ಸರ್ವಾಂಗಕ್ಕೆ ಹೊದ್ದಳು. ಆ ಮಡಿಯ
ಬೆಳಗಿನೊಳಗೆ ನಿರ್ಮಯಲಾದಳು.
ಈ ಮಹಾದೇವಿಯಕ್ಕಗಳ ನಿಲುವು
ಶಿವನಿಗೆ ವೇದ್ಯ, ಶಿವಶರಣರಿಗೆ ವೇದ್ಯ

ಮಹಾದೇವಿ—(ಸಭೆಗೆ ವಂದಿಸಿ)
ನಿಮ್ಮ ಸಜ್ಜನ ಸದಾಚಾರವ ಕಂಡೆನಾಗಿ
ಎನ್ನ ಕಂಗಳ ಪಟಹ ಹರಿಯಿತ್ತಿಂದು
ನಿಮ್ಮ ಸದ್ಭಾವರ ಶ್ರೀ ಚರಣಕ್ಕೆರಗಿದೆನಾಗಿ
ಎನ್ನ ಹಣೆಯ ಲಿಖಿತ ತೊಡೆಯಿತ್ತಿಂದು.
ಚನ್ನಮಲ್ಲಿಕಾರ್ಜುನನ ಶರಣರ
ಪಾದವ ಕಂಡು ನಮೋ ನಮೋ ಎನುತಿದ್ದೆನು.

ಅಲ್ಲಮ—ಈ ಉದಮುದದ ಯೌವನವನೊಳಗೊಂಡು
ಸತಿ ನೀನು ಇತ್ತಲೇತಕೆ ಬಂದೆಯವ್ವಾ ?
ಸತಿಯೆಂದರೆ ಪುರುಷಗೆ ಸಖ್ಯಲೋಕವು

Sri Vidyabharati Book Centre, Sringeri